ಹೊಸಅರಿಕ್ಕ

೧೩, ಸಾಹಿತ್ಯಿಕ - ಸಾಂಸ್ಕೃತಿಕ ದ್ವೈಮಾಸಿಕ ಪತ್ರಿಕೆ.

ಪತ್ರಿಕೆಯು ಅಂತರಂಗದಿಂದ ನಿಮ್ಮ ಅಂತರಂಗಕ್ಕೆ

'ವಸಂತ' 'ಇಂಡಿಯಾದಲ್ಲಿ' 'ಹೇಳಕೀ ಮಾಡ್ಯಾರ ಒಡೆಯರು'
'ಬಿರಿದ ಮೊಗ್ಗು' ಕೃತಿಗಳ ವಿಮರ್ಶೆ

– ಚಂದ್ರಕಾಂತ ಕರದಳ್ಳಿ

ಕನ್ನಡ ಜಾನಪದ ಪ್ರಜ್ಞೆ ವಿಮರ್ಶೆ

– ರಾಜಶೇಖರ ಹತಗುಂದಿ

ಮಕ್ಕಳಿಗಾಗಿ ಕಥೆ ಮುಂತಾದ್ದು

– "ಆಪಾ"

ಸಂಸ್ಕೃತ ಸಾಹಿತ್ಯದಲ್ಲಿ ಸ್ತ್ರೀ

– ಮಹಾಂತಪ್ಪ ಜಾಗಟೆ

ಚಂಪಾ, ಸಿದ್ಧರಾಮ ಹೊನ್ಕಲ್, ರವಿ ಹಿರೇಮಠ, ಶಿವಕುಮಾರ ಕಲ್ಲೂರ, ಡಾ॥ ಅಶೋಕ ಕುಳೀಕುಮಟಗಿ, ಪಿ.ಎಂ. ಮಣ್ಣೂರ, ಸೂರ್ಯಕಾಂತ ಪಾಟೀಲ ಶರಣಪ್ಪ ತೋಟದ, ಪ್ರಭು ಖಾನಾಪುರೆ, ಶಂಕರಯ್ಯ ಘಂಟಿ, ವಿಠ್ಠಪ್ಪ ಗೋರಂಟ್ಲಿ, ಸೂಗಯ್ಯ ಹಿರೇಮಠ, ನಟರಾಜ ಹೂಗಾರ–ಅವರ ಕವನಗಳು.

* ಖಾಸಗಿ ಪ್ರಸಾರಕ್ಕಾಗಿ ಮಾತ್ರ

ಸಾಹಿತ್ಯಿಕ - ಸಾಂಸ್ಕೃತಿಕ ದ್ವೈಮಾಸಿಕ ಪತ್ರಿಕೆ.

ಸಂಪುಟ - ೩ ಸಂಚಿಕೆ - ೧೩ ಮಾರ್ಚ-ಆಗಸ್ಟ ೧೯೯೪

ಸಂಪಾದಕ : **ತಿಮ್ಮಯ್ಯ ಪುರ್ಲೆ**

ಸಲಹೆ : ಚಂದ್ರಕಾಂತ ಕರದಳ್ಳಿ, ಎಸ್. ಬಿ. ಹೊಸ್ಕಲ್, ಸೂಗಯ್ಯ ಹಿರೇಮಠ

ನೀವು ಕಳಿಸುವ ಚಂದಾ "ಹೊಸ ದಿಕ್ಕು" ಬೆಳವಣಿಗೆಯ ಸಂಕೇತ

ವಾರ್ಷಿಕ ಚಂದಾ : ರೂ. ೪೦-೦೦ ⊠ ಅಜೀವ ಚಂದಾ : ರೂ. ೪೦೦-೦೦
ಸಂಸ್ಥೆಗಳಿಗೆ ರೂ. ೫೦-೦೦ ⊠ .. .. : ರೂ. ೫೦೦-೦೦

ಹೈದ್ರಾಬಾದ ಕರ್ನಾಟಕ ಹಾಗೂ ಸುತ್ತಲಿನ ಬಿಜಾಪುರ, ಬಳ್ಳಾರಿ ಜಿಲ್ಲೆಗಳ ಲೇಖಕರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡುವ ಮೂಲಕ ಕನ್ನಡ ನಾಡಿನಾದ್ಯಂತ ತಲುಪಲು ಇಚ್ಛಿಸುವ "ಹೊಸ ದಿಕ್ಕು" ಗೆ ದಯವಿಟ್ಟು ನೀವು ಚಂದಾದಾರರಾಗಿ. ನಿಮ್ಮ ಸ್ನೇಹಿತರನ್ನು, ಆಸಕ್ತರನ್ನು ಚಂದಾದಾರರಾಗಿಸಿರಿ ಲೇಖನ, ಕವನ, ಕಥೆ ಇತ್ಯಾದಿ ಕಳಿಸುವವರು ಸ್ವೀಕೃತಿ ಬಗ್ಗೆ ತಿಳಿಯಲು ಸ್ವವಿಳಾಸದ ಕಾರ್ಡು ಇಡಿ. ಅಂದವಾಗಿ ಬರೆದು ಅಥವಾ ಸುಂದರವಾಗಿ ಟೈಪು ಮಾಡಿಸಿ ಕಳಿಸಿರಿ. ಸದಸ್ಯರಾಗಿ ಪತ್ರಿಕೆಗೆ ಬರಹ ಕಳಿಸಿರಿ.

ಸಂಪಾದಕರು :
"ಹೊಸ ದಿಕ್ಕು"
ಗೀತಾಂಜಲಿ ಬಿಲ್ಡಿಂಗ್
(ದಿಗ್ಗಿ ಬಿಲ್ಡಿಂಗ್ ಹತ್ತಿರ)
ಅಂಚೆ : ಶಹಾಪೂರ-೫೮೫ ೨೨೩

ಚಂದಾ ಕಳಿಸುವ ವಿಳಾಸ :
ಚಂದ್ರಕಾಂತ ಕರದಳ್ಳಿ
ಶಿವಪ್ರಸಾದ ನಿಲಯ
ಶಹಾಪೂರ-೫೮೫ ೨೨೩
ಕಲಬುರ್ಗಿ ಜಿಲ್ಲೆ (ಕರ್ನಾಟಕ)

ಪತ್ರಿಕೆಯ ಅಂತರಂಗ ದಿಂದ ನಿಮ್ಮ ಅಂತರಂಗಕ್ಕೆ

ಸಾಹಿತ್ಯದ ರಾಜಕೀಯ....

ಸಾಹಿತ್ಯಕ್ಕೂ ರಾಜಕೀಯಕ್ಕೂ ಸಂಬಂಧವುಂಟು, ರಾಜಕೀಯವು ಸಾಹಿತ್ಯವನ್ನು ಪೋಷಿಸಿದೆ, ಹಿಂದಿನ ಕನ್ನಡದ ಅನೇಕ ಕವಿಗಳು ರಾಜಾಸ್ಥಾನದಲ್ಲಿದ್ದು, ರಾಜಾಶ್ರಯವನ್ನು ಹೊಂದಿದ್ದರು. ಕನ್ನಡದ ಆದಿಕವಿ ಎಂದು ಕರೆಯಿಸಿಕೊಳ್ಳುವ ಪಂಪ. ವೇಮುಲವಾಡದ ಅರಸನಾದ ಅರಿಕೇಸರಿಯ ಆಸ್ಥಾನದಲ್ಲಿದ್ದವನು. ಇಬ್ಬರಲ್ಲೂ ಗೆಳೆತನದ ಸಲುಗೆಯಿತ್ತೆಂದು ತಿಳಿದು ಬರುತ್ತದೆ. "ಆದಿಪುರಾಣವನ್ನು" ಮೂರು ತಿಂಗಳಲ್ಲಿ ಬರೆದು ಮುಗಿಸಿದರೆ, "ವಿಕ್ರಮಾರ್ಜುನ ವಿಜಯ" ವನ್ನು ಆರು ತಿಂಗಳಲ್ಲಿ ಪೂರ್ಣಗೊಳಿಸಿದನಂತೆ, ಅರಿಕೇಸರಿಗೆ "ಗುಣಾರ್ಣವ" ಎಂಬ ಬಿರುದಿತ್ತು. ಅದಕ್ಕನುಗುಣವಾಗಿ ಪಂಪನಿಗೆ "ಕವಿತಾ ಗುಣಾರ್ಣವ" ನೆಂಬ ಪ್ರಶಸ್ತಿ ದೊರೆಯಿತು. ಪಂಪನು ಅರಿಕೇಸರಿಯನ್ನು ವಿಕ್ರಮಾರ್ಜುನನಿಗೆ ಹೋಲಿಸಿದ್ದರಿಂದ ಅವನಿಗೆ ಅದು ಬರುದಾಗಿ ಉಳಿದು ಬಂತು ತನ್ನನ್ನು ಸ್ನೇಹದಿಂದ ನಡೆಸಿಕೊಂಡ ಅರಿಕೇಸರಿಯ ಹೆಸರನ್ನು ಪಂಪನು ಈ ರೀತಿ ಸದಾಕಾಲ ಉಳಿಯುವಂತೆ ಮಾಡಿದ್ದಾನೆ. ಇಲ್ಲದಿದ್ದರೆ ಸಾಮಂತನಾಗಿದ್ದ ಅವನ ಹೆಸರು ಇಷ್ಟರಮಟ್ಟಿಗೆ ಪ್ರಸಿದ್ಧವಾಗುತ್ತಿರಲಿಲ್ಲ. ಇದು ಸಾಹಿತ್ಯ ಮತ್ತು ರಾಜಕೀಯ ಸಂಬಂಧ.

ಕಲ್ಯಾಣ ನಾಡಿನ ದಂಡಾಧೀಶರಾಗಿದ್ದ ಬಸವಣ್ಣನವರು ಬಿಜ್ಜಳ ರಾಜನ ಆಸ್ಥಾನದಲ್ಲಿದ್ದರೂ ರಾಜಕೀಯಕ್ಕೆ ಮಾತ್ರ ಅವರ ಸೇವೆ ಸೀಮಿತವಾಗಿರಲಿಲ್ಲ. ವಚನ ಚಳವಳಿಯ ನೇತಾರನಾಗಿ, ವೈಚಾರಿಕ ಕ್ರಾಂತಿಯ ಹರಿಕಾರನಾಗಿ ಸಾಮಾಜಿಕ ಬದಲಾವಣೆಯ ಚಿಂತಕನಾಗಿ ತನ್ನ ವಿಚಾರಗಳನ್ನು ವಚನಗಳ ರಚನೆಯ ಜೊತೆಗೆ ಬಿತ್ತುವುದರ ಮೂಲಕ ಅನೇಕ ವಚನಕಾರರನ್ನು ಹುಟ್ಟು ಹಾಕಿದಾತ, ತಾನು ಕಂಡುಕೊಂಡ ಚಳವಳಿಗೆ ಅಕ್ಷರ ಕಲಿಕೆಯ ಮೂಲಕ ಕಾಯಕತತ್ವ ಆಧಾರದ ಮೇಲೆ ಭದ್ರ ಬುನಾದಿಯನ್ನು ನಿರ್ಮಿಸಿದಾತ.

ಬರಗೂರು

— ಸಿದ್ಧರಾಮ ಹೊನ್ಕಲ್

ಬರಗೂರರನ್ನು
ಕಂಡಾಗಲೆಲ್ಲಾ
ನನಗೆ
"ಬೆಂಕಿ"
ನೆನಪಾಗುತ್ತದೆ.
ಹೌದು
ಅವರು
ಸದಾ
"ಬೆಂಕಿ"
ನುಂಗುತ್ತಾರೆ.
ಒಡಲಾಳದಿಂದ
"ಹೂವು"
ಸುರಿಸುತ್ತಾರೆ.



ಬಂಡಾಯದಲ್ಲಿ

ಮಾತು
ಹುಟ್ಟುವುದಿಲ್ಲ
ಮಾತು ಮಥಿಸಿ
ಮೌನ
ಹುಟ್ಟಿದ ಹೊತ್ತು
ಹೊಡಿ ಬಡಿ ಕಡಿ
ದ್ವೇಷದ
ದಾವಾನಲವಿಲ್ಲ
ಸಹನೆ
ಹುಟ್ಟಿದ ಹೊತ್ತು
ಕಲೆಗಾಗಿ ಕಲೆ
ಅಲ್ಲ !
ಸುಂದರ ಸಮಾನತೆಯ
ಬದುಕಿಗಾಗಿ
ಕಲೆ
ಅದೇ
ಕಾವ್ಯದ
ಸೆಲೆ.

" ಕನ್ನಡ ಜಾನಪದ ಪ್ರಜ್ಞೆ "

.... ಡಾ. ವೀರಣ್ಣ ದಂಡೆ

ಪ್ರಕಾಶಕರು :- ಕವಿಮಾರ್ಗ ಪ್ರಕಾಶನ,
ತೇಜಸ್ವಿನಿ ಸರಸ್ವತಿಪುರ ವಿ. ವಿ. ಆಂಚೆ.
ಕಲಬುರ್ಗಿ - ೫೮೫ ೧೦೬

ದಶಕದ ಹಿಂದೆಯೇ ಡಾ: ವೀರಣ್ಣ ದಂಡೆಯವರು ಜನಪದ ಕಾವ್ಯ ಮೀಮಾಂಸೆ ಕೃತಿಯಲ್ಲಿ ಹೊಸ ಬಗೆಯ ಆಲೋಚನೆ ವ್ಯಕ್ತಪಡಿಸಿದ್ದರಿಂದ ಜಾನಪದ ವಿದ್ವಾಂಸರ ಗಮನ ಸೆಳೆದವರು. ಕನ್ನಡ ಜನಪದ ಕತೆಗಳ ಅಧ್ಯಯನಕ್ಕೆ ಡಾ.- ವೀರಣ್ಣ ದಂಡೆಯವರ ಕೊಡುಗೆ ಅಸಾಧಾರಣವಾದದ್ದು

ಇತ್ತೀಚಿಗಷ್ಟೇ ಪ್ರತಿಷ್ಠಿತ ಕಾವ್ಯಾನಂದ ಪ್ರಶಸ್ತಿಗೆ ಆಯ್ಕೆಯಾದ ಕನ್ನಡ ಜಾನಪದ ಪ್ರಜ್ಞೆ ಕೃತಿಯು ಜಾನಪದ ಸಂಶೋಧನೆಗೇ ವಿಶಿಷ್ಟ ಸೇರ್ಪಡೆ ಎನ್ನಬಹುದೇನೋ. ತೀರಾ ಒರಿಜನಲ್ಲಾಗಿ ಗಾಢಶ್ರದ್ಧೆಯೊಂದಿಗೆ ಜಾನಪದ ಸಂಶೋಧನೆಯಲ್ಲಿ ನಿರತರಾಗಿರುವ ಡಾ. ವೀರಣ್ಣ ದಂಡೆಯವರು ಕರ್ನಾಟಕದ ಜಾನಪದ ಸಂಶೋಧನಾ ಕ್ಷೇತ್ರದಲ್ಲಿಯ ಅಪರೂಪದ ವಿದ್ವಾಂಸರು ಎನ್ನುವದಕ್ಕೆ ಕನ್ನಡ ಜಾನಪದ ಪ್ರಜ್ಞೆ ಕೃತಿಯೇ ದೊಡ್ಡ ನಿದರ್ಶನ ಹತ್ತು ವಿಭಾಗಗಳಲ್ಲಿ ವಿಂಗಡಣೆಗೊಂಡ ಇಪ್ಪತ್ತೇಳು ಲೇಖನಗಳು ಈ ಕೃತಿಯಲ್ಲಿ ಸಂಕಲನಗೊಂಡಿವೆ

ಕನ್ನಡ ಜಾನಪದ ಪ್ರಜ್ಞೆ ಕೃತಿಯಲ್ಲಿನ ಲೇಖನಗಳನ್ನು ಇಡಿಯಾಗಿ ಗ್ರಹಿಸುವ ಮತ್ತು ಛಟ್ಟ ಸಾಧನೆಯನ್ನು ಇದಿಷ್ಟೆ ಎಂದು ಬೆಲೆಗಟ್ಟುವ ಕ್ರಮ ನನಗೆ ಅಷ್ಟೇನೂ ಸಮಂಜಸವೆನಿಸಲಿಲ್ಲ ಯಾಕೆಂದರೆ ಪ್ರತಿ ಲೇಖನವು ವಿಶಿಷ್ಟ ಸನ್ನಿವೇಶದಲ್ಲಿ ರಚಿತವಾಗಿದೆ. ಹೀಗಾಗಿ ರಚಿತವಾದ ಸಂದರ್ಭದಿಂದಲೇ ಲೇಖನಕ್ಕೆ ಮಿತಿ ಮತ್ತು ಮಹತ್ವ ಪ್ರಾಪ್ತವಾಗುವ ಸಾಧ್ಯತೆ ಇದ್ದೇ ಇರುತ್ತದೆ ಪ್ರತಿ ಲೇಖ- ನಗಳ ಹಿಂದೆ ಆಂದಾದಿನ ಆಲೋಚನಾ ವಿಧಾನ ಗ್ರಹಿಕೆಯ ಕ್ರಮ ಒತ್ತಾಸೆಯಾಗಿ ನಿಲ್ಲುವದರಿಂದ ಸ್ಪಷ್ಟವಾಗುವ ಇನ್ನೊಂದು ಸಂಗತಿಯೇನೆಂದರೆ. ಲೇಖನದಿಂದ ಲೇಖನಕ್ಕೆ ಪ್ರಬುದ್ಧತೆ ಗೋಚರಿಸುವದೂ ಸಹಜ ಪ್ರಕ್ರಿಯೆಯಾಗಿರುತ್ತದೆ.

ಹಾಗೆಯೇ ಡಾ. ದಂಡೆಯವರು ತಮ್ಮ ಅಧ್ಯಯನದ ಉದ್ದೇಶವನ್ನು ಆರಂಭ ದಲ್ಲೇ ಸ್ಪಷ್ಟಪಡಿಸುತ್ತಾ ಜಾನಪದ ಅಂತರ ಶಿಸ್ತಿಯ ಅಧ್ಯಯನದ ನೆಪದಲ್ಲಿ

ವಿದೇಶಿ ಆಲೋಚನೆಗಳಿಗೆ ಹೆಚ್ಚು ಮಾರು ಹೋಗುತ್ತಿರುವದು ಕಂಡು ಒರುತ್ತಿದೆ ಕನ್ನಡ ಜಾನಪದ ಅಭ್ಯಾಸಕ್ಕೆ ವಿದೇಶಿಯರ ಆಲೋಚನೆಗಳು ತೋರು ಬೆಳಕಾಗ ಬೇಕೇ ವಿನ: ಅಂತಿಮ ಗುರಿಗಳಾಗಬಾರದು ಎಂದು ಹೇಳಿದ್ದಾರೆ

ಮೇಲಿನ ಮಾತುಗಳು ಕೃತಿಯ ಸಂದರ್ಭದಲ್ಲಿ ಎಲ್ಲಾ ಲೇಖನಗಳ ಹಿಂದಿರುವ ಆಲೋಚನಾಸರಣಿಯನ್ನು ನಿಯಂತ್ರಿಸುವಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಿರುವದು ಡಾ. ದಂಡೆಯವರ ಉಗ್ರ ನಿಷ್ಠೆಯನ್ನು ಸಾಬೀತುಪಡಿಸುತ್ತದೆ ಹೀಗಾಗಿ ಸಾತತ್ಯದ ಒಂದು ಎಳೆ ಕೃತಿಯುದ್ದಕ್ಕೂ ಒಳವಿದ್ಯುತ್ತಿನಂತೆ ಕೆಲಸಮಾಡಿರಬಹುದಾದ ಸಂಭವನೀಯತೆಯನ್ನು ನಾನಂತು ಅಲ್ಲಗಳೆಯುವದಿಲ್ಲ

ಕೃತಿಯ ಮೊದಲ ಲೇಖನದಲ್ಲಿ ಜನಪದ ಭಾಷೆಯ ಸ್ವರೂಪದ ಕುರಿತ ಅಷ್ಟೇನೂ ದೀರ್ಘವಲ್ಲದ ಹೆಚ್ಚು ಶಿಸ್ತಿನಿಂದ ಮಂಡಿಸಿದ ಚರ್ಚೆಯಿದೆ ಆಡುಭಾಷೆ ಜನಪದ ಭಾಷೆ ಮತ್ತು ಗ್ರಾಂಥಿಕ ಭಾಷೆಯ ನಡುವಿರುವ ಸೂಕ್ಷ್ಮ ವ್ಯತ್ಯಾಸ ಹಾಗೂ ಅವು ಬಳಕೆಯಾಗುವ ಬಗೆಯನ್ನು ಖಚಿತವಾಗಿ ಗುರುತಿಸಲು ಪ್ರಯತ್ನಿಸಿದ್ದಾರೆ,

ಬೇಂದ್ರೆ, ಕಂಬಾರ, ಪಾಲಿಕಾರರಂತಹ ಕವಿಗಳನ್ನು ಬಹಳ ಜನ ಜಾನಪದ ಕವಿಗಳು ಎಂಬಂತೆ ಮಾತನಾಡುವದನ್ನು ಡಾ. ದಂಡೆಯವರು ಅಲ್ಲಗಳೆಯುತ್ತಾರೆ. ಅಷ್ಟೆ ಅಲ್ಲ ತಮ್ಮ ವಾದಕ್ಕೆ ಪೂರಕವಾಗಿ ಸಮರ್ಥ ಕಾರಣವು ಅವರ ಲೇಖನದ ಸಂದರ್ಭದಲ್ಲಿ ಒದಗಿದ್ದಾರೆ. ಜಾನಪದ ಪರಿಕರಗಳನ್ನು ತನ್ನ ಕಾವ್ಯಕ್ಕೆ ಬಳಸುವ ಶಿಷ್ಟ ಲೇಖಕನ ಪ್ರಯತ್ನ ಪ್ರಯೋಗಶೀಲತೆಯನ್ನಷ್ಟೆ ರುಜುವಾತು ಪಡಿಸುತ್ತದೆ ಹೊರತು ಜಾನಪದ ಸಾಹಿತ್ಯದ ದೃಷ್ಟಿಯನ್ನಲ್ಲ ಆದ್ದರಿಂದ ಡಾ. ದಂಡೆಯವರ " ಅಲ್ಲಗಳೆಯುವಿಕೆ " ಯಲ್ಲಿರುವ ದಿಟ್ಟತೆ ಮತ್ತು ಪ್ರಾಮಾಣಿಕತೆಯನ್ನು ಮೆಚ್ಚಿಕೊಳ್ಳಲೇಬೇಕಾಗುತ್ತದೆ. ಡಾ. ದಂಡೆಯವರ ಪ್ರತಿಭೆಯ ಸಮರ್ಥ ಬಳಕೆ ಮತ್ತು ವಿಶಿಷ್ಟವಾದದ್ದನ್ನು ಅನ್ವೇಶಿಸುವ ಮಹತ್ವಾಕಾಂಕ್ಷೆಯನ್ನು ಜನಪದ ಕಾವ್ಯತತ್ವ ಚಿಂತನೆ ಜನಪದ ಕಥನ ಕಾವ್ಯಗಳು ಹಾಗೂ ಜನಪದ ಕತೆಗಳ ಅಧ್ಯಯನದಂತಹ ವಿಭಾಗದಲ್ಲಿಯ ಲೇಖನಗಳಲ್ಲಿಯ ಲೇಖನಗಳಲ್ಲಿ ಕಾಣಬಹುದಾಗಿದೆ.

ಜನಪದ ಕಾವ್ಯ ಸಮಸ್ಯೆ–ಸಮಾಧಾನಗಳು ಲೇಖನದಲ್ಲಿ ವ್ಯಕ್ತವಾದ ಅಭಿಪ್ರಾಯ ಸಮತೂಕವುಳ್ಳದ್ದು. ಜನಪದ ಕಾವ್ಯಗಳನ್ನು ಭಾವುಕ ನೆಲೆಯಲ್ಲಿ

ಗ್ರಹಿಸಿ ಜನಪದ ಕಾವ್ಯದ ಶ್ರೇಷ್ಠತೆಯನ್ನೇ ಪ್ರತಿಪಾದಿಸುವ ಗುಂಪು ಒಂದು ತುದಿಯಾದರೆ, ಜನಪದ ಕಾವ್ಯವನ್ನು ತೀರ ನಿಕೃಷ್ಟ ನೆಲೆಯಲ್ಲಿ ಗ್ರಹಿಸುವ ಮತ್ತು ಅವಹೇಳನಕ್ಕೆ ಗುರಿಪಡಿಸುವ ಜನ ಇನ್ನೊಂದು ತುದಿಯಲ್ಲಿ ನಿಲ್ಲುತ್ತಾರೆ ಈ ಎರಡು ಗುಂಪಿನ ಅಭಿಪ್ರಾಯಗಳನ್ನು ಸೌಮ್ಯವಾಗಿ ತಳ್ಳಿಹಾಕುವ ಮೂಲಕ ಭಾವುಕವಲ್ಲದ ಮತ್ತು ತಿರಸ್ಕಾರ ರಹಿತ ಮನೋಭಾವ ಬೆಳಸಿಕೊಳ್ಳುವ ಡಾ, ದುಂಡೆಯವರು ಜನಪದ ಕಾವ್ಯವನ್ನು ಅದರ ನಿಜ ನೆಲೆಯಲ್ಲಿಯೇ ವೈಜ್ಞಾನಿಕವಾಗಿ ಅಭ್ಯಾಸ ಮಾಡುವ ವಿಧಾನವೊಂದರ ಶೋಧ ನಡೆಸಿದ್ದಾರೆ,

ಜನಪದ ಕಾವ್ಯದ ವೈಶಿಷ್ಟ್ಯ ಮತ್ತು ಮಿತಿ ಎರಡನ್ನೂ ಗುರುತಿಸುತ್ತಾ "ಜನಪದ ಕಾವ್ಯ ಉದ್ದೇಶಪೂರ್ವಕವಾಗಿ ಸೃಷ್ಟಿಗೊಂಡ ಕಾವ್ಯವಲ್ಲ ಎಂಬ ಪ್ರಚಲಿತದಲ್ಲಿರುವ ಹೇಳಿಕೆಯನ್ನು ಭಾಗಶಃ ಮಾತ್ರ ಒಪ್ಪಿಕೊಂಡು "ಜನಪದ ಕಾವ್ಯದ ಕಲಭಾಗ ಉದ್ದೇಶಪೂರ್ವಕವಾಗಿ ನಿರ್ಮಾಣಗೊಂಡುದೂ ಇದೆ. ಆದರೆ ಬಹುತೇಕವಾಗಿ ಈ ಎರಡೂ ಮನೋಭಾವಗಳಲ್ಲಿ ನಿರ್ಮಿತಿಗೊಂಡ ಈ ಕಾವ್ಯ ಯಾವುದೋ ಒಂದು ವಿಶಿಷ್ಟ ಸಂದರ್ಭದಲ್ಲಿ ಸಹಜವಾಗಿ ಮೈತಳೆದಿರುವದನ್ನು ಗುರುತಿಸಬಹುದಾಗಿದೆ." ಎನ್ನುತ್ತಾರೆ.

ಸಂದರ್ಭಕ್ಕೆ ತಕ್ಕುದಾದ ವಸ್ತುವೇ ಕಾವ್ಯದ ವಸ್ತುವಾಗಿ ಬಿಡುವದರಿಂದ ಹಾಗೂ ಒಂದು ವಿಶಿಷ್ಟ ಸಂದರ್ಭದಲ್ಲಿ ಬಳಕೆಯಾಗುವ ಕಾವ್ಯವನ್ನು ಪ್ರಧಾನವಾಗಿ ಭಾವ, ಲಯ. ತಾಳ, ದಾಟಿ, ರೂಪ. ಛಂದಸ್ಸು, ಭಾಷೆಯೇ ನಿಯಂತ್ರಿಸುವದರಿಂದ "ಜನಪದ ಕಾವ್ಯರೂಪಗಳು ಒಂದು ಗೊತ್ತಾದ ಸಂದರ್ಭದ ಮುದ್ರೆಯೊತ್ತಿಸಿಕೊಳ್ಳುತ್ತವೆ" ಎಂದು ಗೊಂದಲ ಮುಕ್ತವಾದ ನಿಲುವಿಗೆ ತಲುಪುತ್ತಾರೆ. ಗೊತ್ತಾದ ಸಂದರ್ಭವೇ ಕೆಲವೊಮ್ಮೆ ಜನಪದ ಕಾವ್ಯಕ್ಕೆ ಮಿತಿಯೂ ಆಗಿರುತ್ತದೆ ಎಂಬುದನ್ನು ಸರಿಯಾಗಿಯೇ ಗಮನಿಸಿದ್ದಾರೆ.

ಒಂದು ಕಾಲದಲ್ಲಿ ಕೇವಲ "ಹಾಡುವ" ಕಾವ್ಯವಿದ್ದ ಜನಪದ ಕಾವ್ಯ ಇಂದು ಮುದ್ರಿತ ರೂಪ ಪಡೆದು ಓದುವ ಕಾವ್ಯವು ಆಗಿರುವದರಿಂದ ಜನಪದ ಕಾವ್ಯವನ್ನು ವಿಮರ್ಶಿಸುವಲ್ಲಿರುವ ತೊಡಕುಗಳನ್ನು ಬಹು ಸೂಕ್ಷ್ಮವಾಗಿಯೇ ನಿವಾರಿಸಿಕೊಂಡಿದ್ದಾರೆ. ಹಾಡುವ ಕಾವ್ಯಕ್ಕಿರುವ ಸಾಂಸ್ಕೃತಿಕ ಸಂದರ್ಭದ ವೈಶಿಷ್ಟತೆ ಓದುವಾಗಿನ ಜನಪದ ಕಾವ್ಯಕ್ಕಿರುವದಿಲ್ಲ. ಆದಾಗ್ಯೂ ಜನಪದ ಕಾವ್ಯಕ್ಕಿರುವ ಸಾಂಸ್ಕೃತಿಕ ಸಂದರ್ಭದ ಹಿನ್ನಲೆಯ ತಿಳುವಳಿಕೆಯಲ್ಲಿ ಓದುವ ಜನಪದ ಕಾವ್ಯವನ್ನೂ ವಿಮರ್ಶಿಸಬಹುದಾಗಿದೆ ಎನ್ನುವ ಡಾ. ದಂಡೆ-

ಯವರು, ಅದಕ್ಕೊಂದು ತಾತ್ವಿಕ ನೆಲೆ ಒದಗಿಸುವಲ್ಲಿ ಸಫಲರಾಗಿದ್ದಾರೆಂದು ಹೇಳಬಹುದು.

ಶಿಷ್ಟಕಾವ್ಯ ಮತ್ತು ಜನಪದ ಕಾವ್ಯವನ್ನು ಪರಸ್ಪರ ನೋಡುವ ಹಾಗೂ ಬೆಲೆಗಟ್ಟುವ ವಿಧಾನ ಅಸಂಬದ್ಧವಾದುದು ಎನ್ನುವ ಡಾ. ದಂಡೆಯವರು ಹಾಗೆ ಹೋಲಿಸಿ ನೋಡುವಾಗಿನ ಸಮಸ್ಯೆಗಳನ್ನು ಸಾಧ್ಯಾಸಾಧ್ಯತೆಗಳನ್ನು ಗಣನೆಗೆ ತೆಗೆದುಕೊಂಡೇ ಅಂತಹ ನಿಲುವಿಗೆ ತಲುಪಿದ್ದಾರೆ ಎನಿಸುತ್ತದೆ

ಪ್ರಥಮ ವಿಮರ್ಶೆ, ಹೊಸ ಬಗೆಯ ಆಲೋಚನೆಯನ್ನೊಳಗೊಂಡ ಗಂಭೀರವಾಗಿ ಪರಿಗಣಿಸಬೇಕಾದಂತಹ ಡಾ. ದಂಡೆಯವರು ರೂಪಿಸಿದ ಸತ್ವಯುತವಾದ ಸಿದ್ಧಾಂತ ಸುಸಂಗತವಾದ ಆಲೋಚನಾ ವಿಧಾನ ಮತ್ತು ಬರವಣಿಗೆಯ ರೀತಿ ಇವು ಪುನಃ ಒಂದು ಅಭ್ಯಾಸದ ಪ್ರತಿರೂಪವಾಗಿ ಕಾಣಿಸಿಕೊಳ್ಳುತ್ತವೆ ಎಂಬ ಜವಾಬ್ದಾರಿಯುತವಾದ ವಿಮರ್ಶಾ ಪ್ರಜ್ಞೆಯೊಂದಿಗೇನೇ ಪ್ರಥಮ ವಿಮರ್ಶೆಯ ಲೇಖನ ಬರೆಯಲ್ಪಟ್ಟಿದೆ.

ಜನಪದ ಕಾವ್ಯ ಹಾಗೂ ಶಿಷ್ಟಕಾವ್ಯಕ್ಕೆ ಅನ್ವಯಿಸುವ ಹಾಗೆ ಪ್ರಥಮ ವಿಮರ್ಶೆಯ ಪರಿಕಲ್ಪನೆಯನ್ನು ರೂಪಿಸಿದ್ದಾರೆ. ಕಾವ್ಯದ ಪ್ರಥಮ ಓದಿಗೆ ವಿಮರ್ಶಕ ಪಡೆಯಬಹುದಾದ ಅನುಭವದ ಹಿನ್ನೆಲೆಯಲ್ಲಿ ಕಾವ್ಯದ ಕುರಿತ ಮೊದಲ ಅನಿಸಿಕೆಯೇ ಪ್ರಥಮ ವಿಮರ್ಶೆ ಡಾ. ದಂಡೆಯವರ ಮಾತು-ಗಳಲ್ಲಿ ಸ್ಪಷ್ಟಪಡಿಸುವದಾದರೆ ವಿಮರ್ಶಕನ ಮನಸ್ಸು ಭ್ರಷ್ಟವಾಗುವ ಮುನ್ನ ಕಾವ್ಯದ ಕುರಿತು ದಾಖಲಾಗುವ ಒಂದು ಕ್ರಿಯೆ ಪ್ರಥಮ ವಿಮರ್ಶೆ

ಸಹೃದಯರ ಮತ್ತು ವಿಮರ್ಶಕರ ನಡುವೆ ದೊಡ್ಡ ಕಂದಕ ಏರ್ಪಟ್ಟ ಇಂದಿನ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಪ್ರಥಮ ವಿಮರ್ಶೆಯ ಪ್ರಯೋಗ ತೀರಾ ಅಪೇಕ್ಷಣೀಯ ಪ್ರಯತ್ನ. ಗ್ರಹಿಕೆಯ ಮಟ್ಟದಲ್ಲಾಗುವ ವ್ಯತ್ಯಾಸಗಳಿಗೆ ಉಪೇಕ್ಷೆ ಮಾಡದ ಡಾ. ದಂಡೆಯವರು ವಿಮರ್ಶಕನ ಸಂಸ್ಕಾರ ವಿಶೇಷಕ್ಕೆ ಮತ್ತು ಸಹೃದಯನ ಸಂಸ್ಕಾರ ವಿಶೇಷಕ್ಕೆ ಗಣನೀಯ ಪ್ರಮಾಣದಲ್ಲಿ ವ್ಯತ್ಯಾಸ ಇರುವವನ್ನು ಪರಿಗಣಿಸಿಯೇ ಪ್ರಥಮ ವಿಮರ್ಶೆಯನ್ನು ಪ್ರತಿಪಾದಿಸಿದ್ದಾರೆ ಹೀಗಾಗಿ ಪ್ರಥಮ ವಿಮರ್ಶೆಯ ಪ್ರಯೋಗಕ್ಕೆ ದೊರಕುವ ಮನ್ನಣೆಯ ಬಗ್ಗೆ ಕುತೂಹಲ ಬೆಳೆಸಿ-ಕೊಳ್ಳುವುದೇ ಹೆಚ್ಚು ಸೂಕ್ತವಾದುದು.

ಜನಪದ ಕಥಾನಕಗಳಲ್ಲಿಯ ಮೌಲ್ಯಗಳ ಸಂಘರ್ಷವನ್ನು ಕಥನ

ಕಾವ್ಯಗಳನ್ನು ಗಮನದಲ್ಲಿಟ್ಟುಕೊಂಡು ಗಂಭೀರವಾಗಿ ಪರಿಶೀಲಿಸಿದ್ದಾರೆ ಸಾಮಾಜಿಕ ಮೌಲ್ಯ ಮತ್ತು ವೈಯುಕ್ತಿಕ ಮೌಲ್ಯಗಳ ಹಣಾಹಣಿಯಲ್ಲಿ ಅಂತಿಮವಾಗಿ ವೈಯುಕ್ತಿಕ ಮೌಲ್ಯವೇ ಬಲಿಯಾಗುವದನ್ನು ದೇಶೀಯ ಆಲೋಚನೆಯ ತಾತ್ವಿಕ ಹಿನ್ನೆಲೆಯಲ್ಲಿ ಅರ್ಥಪೂರ್ಣ ಚರ್ಚೆ ಏರ್ಪಟ್ಟಿದೆ ಇಂತಹ ಚರ್ಚೆಯ ಮೂಲಕ ಪಡೆಯಬಹುದಾದ ಮೌಲಿಕ ತಿಳುವಳಿಕೆಯೆಡೆಗೆ ವಿಶೇಷ ಗಮನ ಹರಿಸಿದ್ದಾರೆ.

ಈ ಕೃತಿಯಲ್ಲಿ ಐದು ಜನಪದ ಕಥನ ಕಾವ್ಯಗಳಲ್ಲಿ ಎರಡನ್ನು ಪ್ರಥಮ ವಿಮರ್ಶೆಯ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ವಿಮರ್ಶೆಗೊಳಪಡಿಸಿದ್ದಾರೆ. ಹಾಗೆ ನೋಡಿದರೆ ಡಾ. ದಂಡೆಯವರೇ ರೂಪಿಸಿದ " ಪ್ರಥಮ ವಿಮರ್ಶೆಯ ." ಮಾನದಂಡಗಳು ಪೂರ್ಣ ಪ್ರಮಾಣದಲ್ಲಿ ಸಮರ್ಥವಾಗಿ ಬಳಕೆಯಾಗಿದ್ದು, ಅಸುಗರಲಿ ಕಥಾನಕ – ಪ್ರಥಮ ವಿಮರ್ಶೆ, ಮತ್ತು ಸೌಂಸೌತೇರು ಕಥಾನಕ ಪ್ರಥಮ ವಿಮರ್ಶೆಯಲ್ಲಿಯೇ ಈ ಎರಡೂ ವಿಮರ್ಶೆಗಳು ಪ್ರಥಮ ವಿಮರ್ಶೆಗೇನೇ ಮಾದರಿಯಾಗಿ ನಿಲ್ಲಬಲ್ಲಂತಹವು

ಉಳಿದ ಮೂರು ಕಥಾನಕಗಳಾದ ಕೆರೆಗೆ ಹಾರ ಕಾಶೀಬಾಯಿ ಕಥಾನಕ ಕಲಿಯುಗದ ಬಾಲೆ ಕಥಾನಕಗಳನ್ನು ದೀರ್ಘ ವಿಶ್ಲೇಷಣೆಗೆ ಒಳಪಡಿಸಿರುವದರಿಂದ ಲೇಖನ ಹಲವಾರು ಒಳನೋಟಗಳೊಡನೆ ಗಂಭೀರ ಸ್ವರೂಪ ಪಡೆದಿದೆ, ಮತ್ತು ಗಮನಾರ್ಹ ಪ್ರಯತ್ನವೆನಿಸುತ್ತದೆ. ಲೇಖನಕ್ಕೆ ಗಾಂಭೀರ್ಯತೆ ಪ್ರಾಪ್ತವಾಗಿರುವದು. ಕಥಾನಕಗಳ ಅಧ್ಯಯನದಲ್ಲಿ ಲೇಖಕರು ತಾತ್ವಿಕವಾಗಿ ಪ್ರಗತಿಪರ ಮನೋಭಾವನೆ ರೂಢಿಸಿಕೊಂಡಿದ್ದರಿಂದಲೇ ಜೊತೆಗೆ ಡಾ. ದಂಡೆಯವರಿಗಿರುವ . ಅಧ್ಯಯನದ ಶಿಸ್ತು, ಸ್ವಂತಿಕೆಯನ್ನು ಎಲ್ಲೂ ಬಿಟ್ಟುಕೊಡದ ಹಠವಾದಿ ನಿಲುವುಗಳಿಂದಾಗ ಲೇಖನಗಳಿಗೆ ಅನನ್ಯತೆಯ ಗುಣವೂ ಲಭಿಸಿದೆ.

" ಕನ್ನಡ ಜನಪದ ಕಥೆಗಳ ಸಾಂಸ್ಕೃತಿಕ ಮೌಲ್ಯ " ಎಂಬ ಲೇಖನದಲ್ಲಿ ಕನ್ನಡ ಜನಪದ ಕತೆಗಳ ಸಾಹಿತ್ಯಿಕ ಗುಣಕ್ಕಿಂತಲೂ ಹೆಚ್ಚಾಗಿ ಸಾಂಸ್ಕೃತಿಕ ಆಶಯಗಳತ್ತ ಗಮನ ಸೆಳೆದಿದ್ದಾರೆ. ಅಧ್ಯಯನಶೀಲತೆ, ಮತ್ತು ವೈಚಾರಿಕ ಸ್ಪಷ್ಟತೆಯಿಂದಾಗಿ ಇದು ಕೃತಿಯಲ್ಲಿಯ ಅತ್ಯುತ್ತಮ ಬರಹವಾಗಿದೆ.

ಕನ್ನಡ ಜನಪದ ಕಥೆಗಳ ಅಧ್ಯಯನ ಲೇಖನದಲ್ಲಿ ಜನಪದ ಕತೆಗಳ ಹಲವಾರು ಮಾದರಿಗಳನ್ನು ಇಟ್ಟುಕೊಂಡು ಭಾರತೀಯ ಹಾಗೂ ಪಾಶ್ಚಾತ್ಯ ಜನಪದ ಕಥೆಗಳಲ್ಲಿ ಕಂಡು ಬರುವ ಸಾರ್ವತ್ರಿಕ ಗುಣಗಳನ್ನು

ಸರಿಯಾಗಿಯೇ ಗುರುತಿಸಿದ್ದಾರೆ. ಜೊತೆಗೆ ಕನ್ನಡದಲ್ಲಿ ಜನಪದ ಕತೆಗಳ ಸಂಗ್ರಹ-ಪ್ರಕಟಣೆ, ಹಾಗೂ ಅವುಗಳ ಮೌಲಿಕತೆಯ ಕುರಿತು ನಡೆಸಿದ ಚರ್ಚೆ ತುಂಬಾ ಉಪಯುಕ್ತವಾದದು ಎನ್ನಿಸುತ್ತದೆ. ಜನಪದ ಕತೆಗಳ ಕಲೆ ಹಾಕಿದ ಮಾದರಿಗಳ ಕುರಿತ ಅಧ್ಯಯನದಲ್ಲಿ ಹಲವಾರು ಹೊಸ ಮಾದರಿಗಳನ್ನು ಉಲ್ಲೇಖಿಸಿದ್ದಾರೆ

ಥಾಮ್ಸನ್ನರ ಹೇಳಿಕೆಯೊಂದಿಗೆ ಸಹಮತವಿಟ್ಟುಕೊಂಡು ನಡೆಸಿದ ಕೆಲವೊಂದು ಜನಪದ ಕತೆಗಳ ಆಶಯ ಮತ್ತು ಮಾದರಿಗಳ ಕುರಿತ ಚರ್ಚೆಯೂ ವಿಶಿಷ್ಟ ಬಗೆಯದೇ. ಏಕಾಶಯವುಳ್ಳ ಮಾದರಿ ಅಸಾಧ್ಯ ಮತ್ತು ಒಂದೇ ಆಶಯವು ಹೆಚ್ಚು ಸಲ ಪುನರಾವರ್ತನೆಯಾಗುತ್ತದೆ. ಎಂಬ ಖಚಿತ ನಿಲವು ತಾಳಿರುವ ಡಾ. ದಂಡೆಯವರು ಎಲ್. ಆರ್. ಹೆಗಡೆಯವರಂತಹ ವಿದ್ವಾಂಸರ ವಾದ ಸರಣಿಯನ್ನೂ ಪಕ್ಷಾತೀತರಾಗಿ ಗ್ರಹಿಸುವ ಮೂಲಕ ನಿಷ್ಠುರವಾಗಿ ತಳ್ಳಿಹಾಕಿದ್ದಾರೆ.

ಇನ್ನು, ಐತಿಹ್ಯ ಮತ್ತು ಪುರಾಣಗಳನ್ನು ಒಟ್ಟಿಗೆ ನೋಡುವ ವಿಧಾನ ಡಾ. ದಂಡೆಯವರಂದಲ್ಲ ಐತಿಹ್ಯ ಪುರಾಣಗಳ ರಚನೆಯ ಹಿಂದಿನ ಆಶಯ ಹಾಗೂ ಸ್ವರೂಪ ಭಿನ್ನವಾಗಿರುವದನ್ನು ಸರಿಯಾಗಿಯೇ ಗ್ರಹಿಸಿದ್ದಾರೆ ಪುರಾಣ ಮತ್ತು ಐತಿಹ್ಯಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುವ ಡಾ. ದಂಡೆಯವರು ಪುರಾಣಗಳ ಅಧ್ಯಯನ ಕೈಗೊಳ್ಳುವ ಮೂಲಕ ಐತಿಹ್ಯಗಳನ್ನು ಕಡುಕೊಳ್ಳುತ್ತಾರೆ. ಜನಪದ ಪುರಾಣ ಕಥೆಗಳನ್ನು ಆಧಾರವಾಗಿಟ್ಟುಕೊಂಡು ಅವುಗಳಲ್ಲಿ ವೈಜ್ಞಾನಿಕ ಸತ್ಯಗಳನ್ನು ಶೋಧನೆ ಮಾಡುತ್ತಾ ಕೆಲವೊಮ್ಮೆ ಜನಪದ ಪುರಾಣಗಳಲ್ಲಿಯ ಮೂಢನಂಬಿಕೆಗಳಿಗೂ ವೈಜ್ಞಾನಿಕ ಆಶಯವನ್ನು ಆರೋಪಿಸುತ್ತಾರೆ ಎನ್ನುವ ಗುಮಾನಿ ಬಂದರೂ ವಾಸ್ತವದಲ್ಲಿ ಹಾಗೆ ಮಾಡುವದಿಲ್ಲ.

ಕನ್ನಡ ಒಗಟುಗಳ ಕುರಿತು ಲೇಖನದಲ್ಲಿ ಡಾ. ದಂಡೆಯವರ ಪ್ರತಿಭೆ ಸಮರ್ಥವಾಗಿ ದುಡಿದಿದೆ. ಒಗಟುಗಳನ್ನು ಅವರು ಅಭ್ಯಾಸ ಮಾಡುವ ಕ್ರಮ ಅವುಗಳನ್ನು ವ್ಯಾಖ್ಯಾನಿಸುವ ಬಗೆ. ಒರೆಗೆ ಹಚ್ಚಿ ನೋಡುವಲ್ಲಿಯ ಜಾಣ್ಮೆ ಒಗಟುಗಳ ಅಧ್ಯಯನಕ್ಕೆ ಖಚಿತತೆ ತಂದುಕೊಟ್ಟಿದೆ, ಇಷ್ಟೊಂದು ನಿಖರವಾಗಿ ಒಗಟುಗಳನ್ನು ವಿಶ್ಲೇಷಣೆಗೆ ಒಳಪಡಿಸಿದ ನಿದರ್ಶನಗಳೇ ಕನ್ನಡದ ಸಂದರ್ಭದಲ್ಲಿ ತೀರಾ ವಿರಳ. ಒಗಟುಗಳ ಸಂಜ್ಞೆ ಮತ್ತು ಸಂಕೇತಗಳ ರೂಪದಿಂದ ಸಾದೃಶ್ಯ ಕಲ್ಪನೆಗಳ ಬಳಕೆಯವರೆಗೆ ಬೆಳೆದು ಬಂದ ರೀತಿಯನ್ನು ವಿಶಿಷ್ಟವಾಗಿ ಅಭ್ಯಸಿಸಿದ್ದಾರೆ. ಒಂದೇ ಆಶಯವುಳ್ಳ ಭಿನ್ನ ಸಾದೃಶ್ಯ ಕಲ್ಪನೆಯ ಒಗಟುಗಳನ್ನು

ಕಾಣಬಹುದಾದರೆ ಗಾದೆಗಳು ತದ್ವತ್ತಾಗಿ ಪುನರಾವರ್ತನೀಯವಾಗಲಾರವು ಎನ್ನುವದು ಡಾ॥ ದಂಡೆಯವರ ಖಚಿತ ಅಭಿಮತ. ಇದಕ್ಕೆ ಮನುಷ್ಯನ ಮನಸ್ಸಿನ ಸಂಕೀರ್ಣ ಸ್ಥಿತಿಯೇ ಕಾರಣವೆನ್ನುತ್ತಾರೆ, ಅವರು ತಳೆದ ನಿಲುವನ್ನು ಪ್ರಥ್ಥಕ್ಕರಿಸಲು ಹಲವಾರು ಗಾದೆಗಳನ್ನು ಸೂಕ್ಷ್ಮ ಪರೀಶೀಲನೆಗೆ ಒಳಪಡಿಸಿದ್ದಾರೆ. ಪ್ರತಿಯೊಂದು ಗಾದೆಯು ಹಿನ್ನಲೆಯಲ್ಲಿ ಒಂದು ಕತೆಯನ್ನು ಹೊಂದಿರುವದು. ಕತೆಗಳು ಗಾದೆಯನ್ನು ಒಂದು ಅಂಶವನ್ನಾಗಿ ಸ್ವೀಕರಿಸುವದು, ಕೆಲವೊಮ್ಮೆ ಗಾದೆಯೇ ಕತೆಯ ಧ್ಯೇಯವಾಕ್ಯವಾಗಿರುವವನ್ನು ವಿಮರ್ಶಾತ್ಮಕವಾಗಿ ನೋಡಿ-ರುವದರಿಂದ ಒಗಟುಗಳ ವಿಶ್ಲೆಷಣೆಯಂತೆಯೇ ನಮ್ಮ ಗಮನ ಸೆಳೆಯುತ್ತದೆ.

ವಚನಗಳು ಮತ್ತು ಅನುಭವ ಮಂಟಪವನ್ನು ಜಾನಪದದೊಡನೆ ಸಮೀಕರಿಸಿನೋಡುವ ಪ್ರಕ್ರಿಯೆಯಲ್ಲಿ ಡಾ॥ ದಂಡೆಯವರು ಉತ್ಸಾಹದಿಂದ ಮಾತಾಡುವದು ವಚನಗಳು ಮತ್ತು ಅನುಭವ ಮಂಟಪ ಹುಟ್ಟು ಹಾಕಿದ ಸಾಮಾಜಿಕ ಚಳುವಳಿಯ ಕುರಿತೇ ವಚನಗಳಿಗೆ ಜಾನಪದದೊಡನೆ ಸಂಬಂಧ ಕಲ್ಪಿಸಲು ಹೋಗಿ ಬಸವಣ್ಣನವರನ್ನು ಒಬ್ಬ ಜಾನಪದ ತಜ್ಞ ಎಂದು ಬೇರೆ ಹೇಳಿಕೆ ಕೊಡುತ್ತಾರೆ.

ಡಾ. ದಂಡೆಯವರ ಹೇಳಿಕೆ ಹಿಡಿದು ಹೊರಟರೆ ದಟ್ಟ ಸಾಮಾಜಿಕ ಪ್ರಜ್ಞೆಯೊಡನೆ ಜನಪದ ಸಾಹಿತ್ಯ ಸೃಷ್ಟಿಸುತ್ತಿರುವ ಇವತ್ತಿನ ಬಂಡಾಯದ ಬರಹಗಾರರೆಲ್ಲ ಜಾನಪದ ತಜ್ಞರಾಗುವ ಅರ್ಹತೆ ಪಡೆಯುತ್ತಾರೆ. ಬಸವಣ್ಣನವರು ಹುಟ್ಟು ಹಾಕಿದ ವಚನ ಚಳವಳಿ, ಮತ್ತು ಅಪರಿಗಿದ್ದ ಸಾಮಾಜಿಕ ಕಾಳಜಿಯ ಬಗ್ಗೆ ಗೌರವ ಇಟ್ಟುಕೊಂಡೇ. “ ಜಾನಪದ ತಜ್ಞ ” ಎಂಬ ಹೇಳಿಕೆ ಯಾರಿಂದಲೇ ಬಂದರೂ ಅದು ಭಾವುಕ ನೆಲೆಯಿಂದ ಬಂದ-ದ್ದೆಂದೇ ಹೇಳಬೇಕಾಗುತ್ತದೆ. ಯಾಕೆಂದರೆ, ಶಿಷ್ಟ ಸಾಹಿತ್ಯದಲ್ಲಿ ಜಾನಪದೀಯ ಅಂಶಗಳನ್ನು ಗುರುತಿಸುವ ಒಂದು ಪರಿಪಾಠ ನಮ್ಮಲ್ಲಿದೆಯೇನೋ ನಿಜ. ಆದರೆ ಡಾ. ದಂಡೆಯವರು ಪ್ರತಿಪಾದಿಸುವ ವಿಚಾರ ಜಾನಪದ ಸಂಶೋಧನೆಯ ಅವ ರಣದ ಹೊರಗೆ. ನಿಶ್ಚಿತವಾಗಿಯೂ ಬೇಂದ್ರೆ, ಕಂಬಾರ, ವಾಲೀಕಾರರನ್ನು ಜಾನಪದ ಕವಿಗಳೆಂದು ಒಪ್ಪಿಕೊಳ್ಳದ ಡಾ. ದಂಡೆಯವರು ಬಸವಣ್ಣನವರಕುರಿತಾದ ಹೇಳಿಕೆಯನ್ನು ಹೇಗೆ ಸಮರ್ಥಿಸಿ ಕೊಳ್ಳುತಾರೊ ?

ಡಾ. ಬಿ. ಬಿ. ಹೆಂಡಿ ಹಾಗೂ ಅವರ ಪರಂಪರೆಯ ಕುರಿತು ಬರೆಯು ವಾಗ ಆ ಪರಂಪರೆಯ ಗುಣ – ದೋಷಗಳ ಅರ್ಥಪೂರ್ಣ ಚರ್ಚೆಯನ್ನು ಬೆಳೆಸು ವ ಬದಲಿಗೆ ಅವರ ಸಾಧನೆಯನ್ನು ಏಕಮುಖವಾಗಿ ಹೊಗಳುವ ಆತುರವನ್ನೇ

ವ್ಯಕ್ತಪಡಿಸಿದ್ದಾರೆ ಡಾ. ಬಿ. ಬಿ. ಹೆಂಡಿಯವರ ಪರಂಪರೆಯೊಂದಿದೆ ಎನ್ನುವ ವಿರಳ ಮಾತಲ್ಲ. ಆದರೆ ಡಾ. ಬಿ. ಬಿ. ಹೆಂಡಿಯವರಿಗಿದ್ದ ಸಂಶೋಧನೆಯ ಶಿ ಮಿದ್ವತ್ತು ಮಹತ್ವಕಾಂಕ್ಷೆ ಅವರ ಪರಂಪರೆಯ ಯಾರೊಬ್ಬರಲ್ಲೂ ಪೂರ್ಣ ಪ್ರಮಾಣದಲ್ಲಿ ಪ್ರಕಟಗೊಳ್ಳಲಿಲ್ಲವೇನೋ ?

ಈ ಮೇಲಿನ ಮಾತಿಗೆ ಅಪವಾದವಾಗಿ, ಡಾ. ಬಿ. ಬಿ. ಹೆಂಡಿಯವರ ಉಜ್ವಲ ಪರಂಪರೆಯನ್ನು ಸಮರ್ಥವಾಗಿ ಮುಂದುವರಿಸಿಕೊಂಡು ಹೋಗುತ್ತಿರುವವರಲ್ಲಿ ಡಾ. ವೀರಣ್ಣ ದಂಡೆಯವರೊಬ್ಬರೇ ಪ್ರಮುಖರಾಗಿ ಕಾಣುತ್ತಾರೆ. ಡಾ. ಪ್ರಾ. ನಾಯಕ, ಜೀ ಶಂ. ಪರಮಶಿವಯ್ಯ, ಎಂ ಎಂ. ಕಲಬುರ್ಗಿ, ಚಿದಾನಂದ ಮೂರ್ತಿ, ದೇವೇಂದ್ರಕುಮಾರ ಹಕಾರಿ, ಇತ್ಯಾದಿ ಕನ್ನಡ ಜಾನಪದ ಸಂಶೋಧಕರ ಸಾಧನೆಯೊಡನೆ ಹೋಲಿಸಿದರೆ, ಎಂ. ಜಿ. ಬಿರಾದಾರ, ಎ. ಎಸ್. ಅತ್ತೆ, ಶಶಿಕಲಾ ಮೋಳ್ದಿ, ಸವದತ್ತಿಮಠ, ಬಸವರಾಜ ಪೊಲೀಸಪಾಟೀಲ, ಇವರ ಸಾಧನೆ ತೀರಾ ಕಡಿಮೆಯಾಯಿತೇನೋ ಎನ್ನುವ (ಸಂಖ್ಯೆಯಲ್ಲಲ್ಲ, ಸತ್ವದಲ್ಲಿ) ಗುಮಾನಿ ಬರದೇ ಇರದು.

ಡಾ. ಬಿ. ಬಿ. ಹೆಂಡಿಯವರ ಪರಂಪರೆಯ ಹೊರಗಿದ್ದ ಕೋ ಜಾನಪದ ಸಂಶೋಧನೆಯಲ್ಲಿ ಪ್ರಯತ್ನಶೀಲರಾಗಿರುವ ವಾಲೀಕಾರ, ಖಂಡೋಬಾ ಮಾಲಶೆಟ್ಟಿ ಯಾಕೆ ಗಮನ ಸೆಳೆಯುತ್ತಾರೆ ಎನ್ನುವದು ಚರ್ಚಾರ್ಹ ಸಂಗತಿ.

ಕನ್ನಡ ಬೀದಿ ಬಯಲಾಟಗಳ ಕುರಿತ ಅಧ್ಯಯನ ಹೊಸ ಆವಿಷ್ಕಾರವೇ ಆಗಿದೆ. ಡಾ. ದಂಡೆಯವರು ಬೀದಿ ಬಯಲಾಟಗಳನ್ನು ಬಯಲಾಟಗಳ ಹೊಸ ಪ್ರಕಾರವಾಗಿ ನೋಡುತ್ತಾರೆ. ವ್ಯಾಪಕ ಕ್ಷೇತ್ರ ಕಾರ್ಯನಡೆಸಿ ಎರಡು ಬೀದಿ ಬಯಲಾಟಗಳ ಗೀತ ರೂಪಗಳನ್ನು ಸಂಗ್ರಹಿಸಿ ಸ್ತುತ್ಯಾರ್ಹ ಕಾರ್ಯ ಮಾಡಿದ್ದಾರೆ

ಜನಪದ ಪ್ರದರ್ಶನ ಕಲೆಗಳ ಕುರಿತ ಲೇಖನ ತೀರಾ ಕಟ್ಟುನಿಟ್ಟಿನ ಪುರವಂತರ ಪ್ರದರ್ಶನ ಕಲೆಯ ಅನುಭವ ನೀಡುವವರಿಂದ ಧಾರ್ಮಿಕ ಮತ್ತು ಸಾಂಪ್ರದಾಯಿಕ ಪರಿಸರದಲ್ಲೇ ಗುರುತಿಸಿಕೊಳ್ಳುವುದರಿಂದ ಅದನ್ನು ಕೇವಲ ವಿಧಿಕ್ರಿಯೆಯೆಂದು ಪರಿಗಣಿಸುತ್ತಾರೆ: ಹೊರತು ಕಲೆಯನ್ನಾಗಿ ಅಲ್ಲ. ಜನಪದ ಕಲೆಗಳಲ್ಲಿಯ ನಿರರ್ಥಕ ಭಾಗಗಳನ್ನು ಕಡಿದುಹಾಕಿ ನೋಡುವ ಸಾಹಸವು ಮಾ

ದ್ದಾರೆ. ಒಟ್ಟಾರೆ ಜನಪದ ಕಲೆಗಳೊಳಗೆ ಅಂತರ್ಗತವಾಗಿರುವ ಬೂರ್ಜ್ವಾ ಮಾದರಿಯ ಅನಿಷ್ಟ ಸಂಪ್ರದಾಯಗಳನ್ನು ವಿಧಿಕ್ರಿಯೆಗಳನ್ನು ಒರೆಗೆ ಹಚ್ಚಿ-ನೋಡಿ ಹೊಸದಾಗಿ ಹಲವಾರು ಶುದ್ಧ ಜನಪದ ಕಲೆಗಳನ್ನು ಪತ್ತೆ ಹಚ್ಚಿದ್ದಾರೆ.

ಈ ಕೃತಿಯಲ್ಲಿ ಗ್ರಾಮದೇವತೆಗಳಿಗೆ ಸಂಬಂಧಪಟ್ಟಂತೆ ಎರಡು ಲೇಖನಗಳನ್ನು ಸೇರಿಸಿದ್ದಾರೆ. ಒಂದು ಎಲ್ಲಮ್ಮನ ಬಗ್ಗೆ, ಎರಡು ಹನುಮಂತನ ಬಗ್ಗೆ. ಎಲ್ಲಮ್ಮನ ಕುಣಿತವನ್ನು ಜನಪದ ಕಲೆಯೆಂದು ಒಪ್ಪದ ಡಾ. ದಂಡೆ-ಯವರು ಎಲ್ಲಮ್ಮನ ಸಂಪ್ರದಾಯದವರ ಹಾಡು, ವಾದ್ಯದ ಬಗ್ಗೆ ದೀರ್ಘವಾಗಿಯೇ ಬರೆದಿದ್ದಾರೆ. ಚೌಡಿಕೆ ಶಬ್ದದ ನಿಷ್ಪತ್ತಿಯನ್ನು ಹಲವಾರು ವಿದ್ವಾಂಸರ ಅಭಿಪ್ರಾಯದೊಡನೆ ಪರಿಶೀಲಿಸಿದ್ದಾರೆ. ಇಲ್ಲೆಲ್ಲಾ ಅಭ್ಯಾಸಮಾಡುವ ಕುತೂ-ಹಲವಷ್ಟೆ ಪ್ರಮುಖವಾದಂತಿದೆ. ಗಂಭೀರ ಕಾಳಜಿ ವ್ಯಕ್ತವಾಗುವದಿಲ್ಲ. ಆದರೆ ಗ್ರಾಮದೇವತೆ ಹನುಮಂತನ ಕುರಿತ ಲೇಖನ ಹಾಗಲ್ಲ. ಹಲವಾರು ಸೂಕ್ಷ್ಮ ಒಳನೋಟಗಳೊಡನೆ ತೆರೆದುಕೊಳ್ಳುವ ಲೇಖನ ಹೊಸ ಹುಡುಕಾಟದ ತುಡಿತದಲ್ಲಿದೆ. ದ್ರಾವಿಡ ಮೂಲದ ಹನುಮಂತನಿಗೆ ವೀರಶೈವರು, ವೈದಿಕರು, ಮುಸ್ಲಿಮರು ತಮ್ಮ ತಮ್ಮ ನೇರಕ್ಕೆ ಅರ್ಥೈಸಿದ್ದನ್ನು ತಾತ್ವಿಕ ತಿಳುವಳಿಕೆಯೊಂದಿಗೆ ಬಯಲು ಮಾಡಿದ್ದಾರೆ. ಪ್ರಧಾನ ಸಂಸ್ಕೃತಿಯು ಉಪ-ಸಂಸ್ಕೃತಿಯಲ್ಲಿ ಜನಪ್ರಿಯತೆಗಳಿಸುವ ನಂಬಿಕೆ, ಆಚರಣೆ, ದೇವತೆಯನ್ನು ತನ್ನದೆಂದು ವಾದಿಸುವ ಕೆಟ್ಟ ಪ್ರವೃತ್ತಿಗೆ ಆಕ್ಷೇಪಣೆಯೂ ವ್ಯಕ್ತಪಡಿಸಿದ್ದು ಉಲ್ಲೇಖನೀಯ.

ಒಟ್ಟಾರೆ ಡಾ. ವೀರಣ್ಣ ದಂಡೆಯವರು " ಕನ್ನಡ ಜಾನಪದ ಪ್ರಜ್ಞೆ " ಕೃತಿಯುದ್ದಕ್ಕೂ ದೇಸೀ ಆಲೋಚನೆಗಳನ್ನು ಬಳಸಿಕೊಂಡಿದ್ದು ಶ್ಲಾಘನೀಯ, ಹಾಗೆಯೇ ಪ್ರತಿಯೊಂದು ಲೇಖನದ ಮೇಲೆ ತನ್ನ ವಿಶಿಷ್ಟ ಛಾಪನ್ನು ಉಳಿಸಿದ್ದಾರೆ.

ಈ ಕಾರಣಕ್ಕಾಗಿಯೆ " ಕನ್ನಡ ಜಾನಪದ ಪ್ರಜ್ಞೆ " ಕೃತಿಯು ಉತ್ತಮ ಕೃತಿಗಳ ಶ್ರೇಣಿಗೆ ಸೇರುವಂತಹದ್ದು. ಹಾಗೆಯೇ ಡಾ. ವೀರಣ್ಣ ದಂಡೆಯವರು ಹೆಮ್ಮೆಪಡಬಹುದಾದ ಜಾನಪದ ವಿದ್ವಾಂಸರಾಗಿ ನಮಗೆ ಪ್ರಮುಖರಾಗುವದು.

– O –

ಮಕ್ಕಳಿಗಾಗಿ ಕತೆ ಮುಂತಾದವು

– ಅ. ಪಾ.

ವಾಲ್ಟ್ ಡಿಸ್ನಿಯ ಅಂಕಲ್‌ಕ್ರೂಸ್, ಡೊನಾಲ್ಡ್‌ಡಕ್, ಹಿಂದಿಯ [illegible] ಮಾತನಾಡತೊಡಗಿ ಭಾರತದಲ್ಲಿ ಮಕ್ಕಳಿಗೆ ಇನ್ನೂ ಹತ್ತಿರವಾದ ಸುದ್ದಿ ಈಗ ಹೊಸತೇನಲ್ಲ. ಮಕ್ಕಳಿಗಾಗಿಯೇ ಚಲನಚಿತ್ರಗಳು ಇಲ್ಲವೇ ಇಲ್ಲವೆನ್ನುವ ನಮ್ಮ ಪರಿಸರದಲ್ಲಿ ಪರದೇಶದ ಭಾಷೆಯಲ್ಲಿ ಬಂದಾಗಲೂ ಮಿಕ್ಕಿಮೌಸ್, ಡೊನಾಲ್ಡ್ ಡಕ್‌ರ ಸಾಹಸ ಲುಟುಪುಟು ಓಡಾಟ ದೃಶ್ಯ ನಮ್ಮ ಮಕ್ಕಳನ್ನು ಕುಣಿದು ನೋಡುವಂತೆ ಮಾಡುತ್ತಿದ್ದವು. ಈಗ ದೂರದರ್ಶನದಲ್ಲಿ ಭಾರತೀಯ ಭಾಷೆಯಲ್ಲೇ ಅವು ಮಾತನಾಡತೊಡಗಿ ಖುಷಿ ಪಡುವುದು ಸಹಜವಾಗಿಯೇ ಇದೆ. ಆದರೆ ಈ ಭಾಗ್ಯ ಉತ್ತರ ಭಾರತದ ಮಕ್ಕಳಿಗಷ್ಟೆ. ದಕ್ಷಿಣ ಭಾರತದ ಮಕ್ಕಳಿಗೆ ಅವುಗಳ ಭಾಷೆಯಲ್ಲಿ ಇನ್ನೂ ಕೆಲ ಕಾಲದ ನಂತರವೇ ಬರಬಹುದು. ಆದರೂ ಭಾನುವಾರ ಬಂತೆಂದರೆ ಮಕ್ಕಳು ಟಿ. ವಿ. ಮುಂದಿನಿಂದ ಸರಿಯುವುದಿಲ್ಲ. ಕೆಲ ಕಡೆ ಭಾನುವಾರವೂ ಶಾಲೆಗಳು ಮಕ್ಕಳಿದ್ದು ಕಿರಿಕಿರಿಪಟ್ಟುಕೊಳ್ಳುವುದೂ ಇದೆ.

ಇದೆಲ್ಲ ಮಕ್ಕಳ ವಿಷಯವಾದರೆ ಭಾರತೀಯ ಭಾಷೆಗಳಲ್ಲಿ ಹೀಗೆ ಹೊರದೇಶದ ಚಿತ್ರಗಳು ಬರತೊಡಗಿರುವುದು ಕೆಲ ವಲಯಗಳಲ್ಲಿ ಕಳವಳವನ್ನುಂಟು ಮಾಡಿದೆ. ಭಾರತೀಯ ಚಲನಚಿತ್ರರಂಗ ಇದರಿಂದ ಸಾಕಷ್ಟು ಹಾನಿ ಅನುಭವಿಸಬೇಕಾಗಬಹುದೆಂಬ ಚಿಂತೆಯೇ ಅದಕ್ಕೆ ಕಾರಣ. ಮೊದಲೇ ತೀವ್ರ ನಷ್ಟಪಟ್ಟು ಅಧೋಗತಿಯಲ್ಲಿ ಸಾಗಿರುವ ಸಿನಿಮೋದ್ಯಮ ಚಿತ್ರರಂಗ ಈಗ ದೊಡ್ಡ ಆಘಾತ ಪಡೆಯಬಹುದಾಗಿದೆ, ದುಬಾರಿ ವೆಚ್ಚದಲ್ಲಿ ಚಿತ್ರ ತಯಾರಿಸಿ ಸುಲಭ ಬೆಲೆಯ ಪರದೇಶಗಳ ಸರಕಿನ ಮುಂದೆ ಪೈಪೋಟಿ ಮಾಡಲಾಗದೆ ಕೈಸುಟ್ಟುಕೊಳ್ಳುವ ಪ್ರಮೇಯವಿದೆ. ಇಷ್ಟೊಂದು ಬರಿಯ [illegible] ದರೆ [illegible] ಜಗತ್ತಿನಿಂದ ಬಂದ ಪಾತ್ರಗಳು ಭಾರತೀಯ ಪರಿಸರಕ್ಕೆ ಎಷ್ಟರಮಟ್ಟಿಗೆ ಒಗ್ಗುತ್ತವೆ. ಇಲ್ಲಿನ ಮಕ್ಕಳ ಮನದಲ್ಲಿ ಎಷ್ಟರಮಟ್ಟಿಗೆ ಇಳಿಯುತ್ತವೆ ಎನ್ನುವುದು ಇನ್ನೊಂದು ಪ್ರಶ್ನೆ. [illegible] ದುಷ್ಟರಿಗೂ [illegible] ಬೆರಗಾಗಿಸುವ ಕುತೂಹಲದಿಂದ ಕಾಯುವ ಕತೆಗಳಿದ್ದು ಜಗತ್ತಿನ ಯಾವ ಮಗುವನ್ನು ಮುಟ್ಟಬಲ್ಲ ಯೋಗ್ಯತೆ ಅವುಗಳಿಗಿದೆ ಎಂಬುದನ್ನು ತಳ್ಳಿ ಹಾಕಲಾಗದು. ಆದರೂ ಅಲ್ಲಿನ ಕತೆಗಳಲ್ಲಿ ನಡೆಯುವುದು, ನಮ್ಮ ಮಕ್ಕಳಿಗೆ ಪರಕೀಯವಾದ ಪರಿಸರದಲ್ಲಿಯೇ. ಮನೆ, ಮಾಡು, ಉಡಿಗೆತೊಡಿಗೆ, ತಿಂಡಿ ತಿನಿಸು, ರೀತಿ ರಿವಾಜು ಎಲ್ಲ ಬೇರೆಯವು. ಈಗ ದೂರದರ್ಶನದಿಂದ ಭಾರತೀಯ ಮಕ್ಕಳಿಗೆ ಮುಟ್ಟುತ್ತಿರುವಗಿವೆಯೆಂದರೂ, ಇಂಥ [illegible] ಬಿಟ್ಟ

ಮಕ್ಕಳ ಸಂಖ್ಯೆಯಲ್ಲಿ ಗಮನಾರ್ಹ ಸಂಖ್ಯೆಯದೇನಲ್ಲ. ಗ್ರಾಮೀಣ ಪರಿಸರದಲ್ಲಿಯೇ ಬೆಳೆಯುವ ನಮ್ಮ ಹೆಚ್ಚಿನ ಮಕ್ಕಳು ಇನ್ನೂ ಇವನ್ನು ನೋಡಿಲ್ಲ ಎನ್ನುವುದು ಅಷ್ಟೇ ಸತ್ಯದ ವಿಷಯ.

ಇದರ ಜೊತೆಗೇ ಭಾರತೀಯ ಪರಂಪರೆಯಲ್ಲಿ ಬೆಳೆದುಬಂದ ಕಥಾ-ಜಗತ್ತಿನಿಂದ ಈ ಹೊಸ ಜಗತ್ತು ತುಂಬ ಭಿನ್ನವಾಗಿದ್ದು ಅದರ ಪರಿಣಾಮಗಳು ವಿಶಿಷ್ಟವಾಗಬಹುದಾಗಿದೆ. ಪಂಚತಂತ್ರದ ಕತೆಗಳು ಮಕ್ಕಳಿಗಾಗಿಯೇ ಎಂದು ನಾವು ಅಂದುಕೊಳ್ಳುತ್ತೇವೆ. ಆದರೆ ಅವುಗಳ ಉದ್ದೇಶ ಅಷ್ಟಕ್ಕೆ ಸೀಮಿತವಾಗಿಲ್ಲ ಎನ್ನುವುದೂ ಅಷ್ಟೇ ಸತ್ಯ. ಬೇತಾಳ ಪಂಚವಿಂಶತಿ ಕಥೆಗಳೂ ಹಾಗೆಯೇ. ನಂತರ ಬಂದ ಮನೆಮಾತಾದ ಅರೇಬಿಯಾದ ರಾತ್ರಿಯ ಕತೆಗಳು ಅದರೊಟ್ಟಿಗೆ ಅಸಂಖ್ಯವಾಗಿರುವ ನಮ್ಮ ದೇಶದ ಜನಪದ ಕತೆಗಳು ಇವೆಲ್ಲ ಮಕ್ಕಳ ಕಥಾ ಸಾಹಿತ್ಯವಾಗಿ ನಾವು ಕೇಳುತ್ತ ಬಂದಿದ್ದೇವೆ. ಇವುಗಳೆಲ್ಲ ಎಷ್ಟರ ಮಟ್ಟಿಗೆ ಮಕ್ಕಳನ್ನು ರಂಜಿಸಿವೆ. ಮಕ್ಕಳಿಗೆ ಉದ್ದೇಶಪಟ್ಟು ಏನನ್ನು ಹೇಳಿವೆ ಇವೆಲ್ಲ-ವನ್ನೂ ಇವತ್ತು ವಿಶೇಷವಾಗಿಯೆ ನೋಡಬೇಕೆನಿಸುತ್ತದೆ. ಕತೆ ಚಲನಚಿತ್ರವೇ ಆಗಿಬರಹುದು, ಪುಸ್ತಕದಲ್ಲಿ ಚಿತ್ರಗಳೊಡನೆ ಮುದ್ರಿತವಾಗಿ ಬರಬಹುದು. ಹಿರಿಯರಿಂದ ಕೂಡಿಕೊಂಡು ಕೇಳುವುದಾಗಬಹುದು ಅದೆಲ್ಲ ಆ ಮಾಧ್ಯಮದ ವಿಶೇಷತೆಗಳನ್ನು ಬಿಟ್ಟರೆ ಒಂದೇ ಜಗತ್ತನ್ನು ಹೇಳುತ್ತಿದ್ದವು.


ಈ ಬೇರೆ ಬೇರೆ ಮಾಧ್ಯಮಗಳ ಮಾತು ಬಂದಾಗ ನೋಡಿರಿ. ಇಲ್ಲೂ ಏನೆಲ್ಲ ಯೋಚಿಸುವುದಕ್ಕಿದೆ ಮಕ್ಕಳಲ್ಲಿ ಎಲ್ಲಿ ಕಡೆಯ ಹಾಗೆ ನಮ್ಮಲ್ಲಿ ಸುತ್ತ ಸುತ್ತ ಕೂಡಿಸಿಕೊಂಡು ಕತೆ ಹೇಳುವ ರೂಢಿ ಬೆಳೆದುಕೊಂಡು ಬಂದಿದೆ, ಅಲ್ಲಿ ಕೆಲ ಸೌಲಭ್ಯಗಳಿವೆ. ಮುಖ್ಯವಾಗಿ ಕತೆ ಹೇಳುವಾತ ಕೇಳುವ ತ ಹತ್ತಿರದಲ್ಲೆ ಇರುತ್ತಾನೆ. ಹೀಗಾಗಿ ಪರಸ್ಪರ ಪ್ರತಿಕ್ರಿಯಿಸಲು ಅನುಕೂಲವಾಗುತ್ತದೆ ಕತೆ ಬೇರೆಲ್ಲೋ ನಡೆದಿದ್ದು ಎಂದಾದರೂ ಅದು ಕೇಳಿಬರುವುದು ಅದು ಒಬ್ಬ ಖಾಸಾ. ತೀರ ಹತ್ತಿರದ ವ್ಯಕ್ತಿಯಿಂದ ಹೀಗಾಗಿ ಕತೆಗಾರ. ಕೇಳುಗರ ನಡುವೆ ಒಂದು ಜೀವಂತ ಸಂಬಂಧ ಏರ್ಪಟ್ಟಾಗಿರುತ್ತದೆ. ಜೊತೆಗೆ ಕೇವಲ ಬಾಯಿ ಹಾವಭಾವಗಳಿಂದ ಎಲ್ಲವನ್ನೂ ವ್ಯಕ್ತಪಡಿಸುವುದರಿಂದ ಕಲ್ಪನೆಗೆ ತುಂಬಾ ಅವಕಾಶ ಸಿಗುತ್ತದೆ. ಜೊತೆಗೆ ಕತೆಯು ಹೇಳಿಕೆ ನಡೆಯುವುದು ತನ್ನದೇ ಆದ ಪರಿಸರ ಭಾಷೆಯಲ್ಲಿ ಈ ಎಲ್ಲವೂ ಬೇರೆ ಮಾಧ್ಯಮಕ್ಕಿಂತ ಕತೆ ಹೇಳುವುದಕ್ಕಿರುವ ಅನುಕೂಲತೆಗಳು ಜೊತೆಗೆ ಇಲೆಕ್ಟ್ರಾ-ನಿಕ್ ಮಾಧ್ಯಮ ಖುಷಿಯೇನೊ ಕೊಡಬಹುದು. ಆದರೆ ಕಣ್ಣಿನಮೇಲೆ ಆರೋಗ್ಯದ ಮೇಲೆ ಅದರ ಕೆಲ ಪರಿಣಾಮಗಳು ಇದ್ದೇ ಇರುತ್ತವೆ. ಏನೇ ಇದ್ದರೂ

ಗೊಂದಲದಲ್ಲಿ ಬೀಳುತ್ತೇನೆ.

ಇದನ್ನೆಲ್ಲ ನೋಡುವಾಗ ಲೇಖಿಕನ, ಕತೆ ಹೇಳುವವನ ಸಾಹಿತ್ಯ ನೀಡುವವನ ಜವಾಬ್ದಾರಿ ತುಂಬಾ ಇದೆ ಎನ್ನಿಸುತ್ತದೆ ನಮ್ಮಲ್ಲಿ ಒಂದು ಕೆಲಸವಾಗುತ್ತಿದೆ ಹಳ್ಳಿಯ ಜನಪದ ಕತೆಗಳನ್ನೆಲ್ಲ ಅಷ್ಟಿಷ್ಟು ಸರಳಗೊಳಿಸಿ ಕಿರಿದುಗೊಳಿಸಿ ಪತ್ರಿಕೆಯ ಕಾಲಮ್ಮುಗಳಿಗೆ ಸರಿ ಹೊಂದುವಷ್ಟು ಮಾಡಿ ಬರೆಯುವುದು ಮಕ್ಕಳಿಗಾಗಿ ಕತೆ ಎಂದರೇ ಮುಕ್ಕಾಲು ಪಾಲು ಇಂಥವೇ. ಜನಪದ ಕತೆಗಳು ಮಕ್ಕಳ ಕತೆಗಳಲ್ಲ, ಅವನ್ನೆಲ್ಲ ಸರಿಸುಮಾರಾಗಿ ದೊಡ್ಡವರೇ ಮಾಡಿದವು. ದೊಡ್ಡವರಿಗಾಗಿಯೇ ಹೇಳಿದುವು. ಅಂಥಕತೆಗಳನ್ನು ಸಾಕಷ್ಟು ಹೊತ್ತು ಬೆಳೆಸಿ ಹೇಳುವವರಿದ್ದರು, ಕೇಳುವವರಿದ್ದರು. ಜನಪದರ ಸಾಹಿತ್ಯ ಭಂಡಾರ ಅದು. ಅದರಲ್ಲಿ ಅವರ ಮನ ಪ್ರಪಂಚವೆಲ್ಲ ಅಭಿವ್ಯಕ್ತಗೊಂಡಿದೆ. ಇಂದಿಗೂ ಗೊಂದಲಿಗರು ದೀರ್ಘವಾಗಿ ಮಾಡುವ ಕತೆಗಳು ಇಂಥವೇ, ಜಾನಪದ ಮಾನವ ಸಂಸ್ಕೃತಿಯ ಬಾಲ್ಯಾವಸ್ಥೆ ಅಂತ ಹೇಳುವುದಿದೆ. ಹಾಗೇಂತ ಅವರ ರಚನೆಗಳು ಒಂದೊಮ್ಮೆ ಆಗಿ ಬಿಟ್ಟಂಥವಲ್ಲ ಮಕ್ಕಳಿಗಾಗಿ ಸರಿಹೊಂದುವಂಥವೂ ಅಲ್ಲ ಮಕ್ಕಳ ಮನಸ್ಸನ್ನು ಆಕರ್ಷಿಸುವ ಕೆಲ ಸಂಗತಿಗಳು ಅಲ್ಲಿವೆ ಅದನ್ನೊಪ್ಪೋಣ ಆದರೆ ಸಾರಾಸಗಟಾಗಿ ಆ ಕತೆಗಳನ್ನು ಮಕ್ಕಳಿಗೆ ಹೇಳುವುದು ತಪ್ಪಾಗುತ್ತದೆ. ಮಕ್ಕಳಿಗೆ ಹೇಳುವದಾದರೆ ಯಾವ ವಯಸ್ಸಿನ ಮಕ್ಕಳಿಗಾಗಿ ಹೇಳುತ್ತಿದ್ದೇವೆ ಎನ್ನುವುದರ ಗಮನ ನಮಗಿರಬೇಕು. ಚಂದಾಮಾಮಾದ ಕತೆಗಳನ್ನು ಮಕ್ಕಳು ಖಂಡಿತ ಓದುತ್ತಾರೆ. ಕೆಲದೊಡ್ಡವರೂ ಇನ್ನೂ ಆಸಕ್ತಿಯಿಂದ ಓದುವವರಿದ್ದಾರೆ. ಇಂಥ ಕತೆಗಳಲ್ಲಿ ಮಕ್ಕಳಿಗಾಗಿ ಏನಿದೆ ? ಸುಮಾರಾಗಿ ಐದನೆಯ ಕ್ಲಾಸು ಅಲ್ಲಿಂದಾಚೆ ಓದು ಚೆನ್ನಾಗಿ ಬರತೊಡಗಿ ಹೈಸ್ಕೂಲು ಮುಗಿಯುವವರೆಗಿನ ಅವಧಿಯ ಮಕ್ಕಳೆಲ್ಲ ಚಂದಾಮಾಮದಿಂದ ಆಕರ್ಷಿತರಾಗಿರುತ್ತಾರೆ. ನನಗೆ ನೆನಪಿರುವ ಹಾಗೆ ಹೈಸ್ಕೂಲು ದಿನಗಳಲ್ಲಿ ನಾನು ಚಂದಾಮಾಮ ಓದುತ್ತಿದ್ದೆ ತುಂಬಾ ಆಸಕ್ತಿಯಿಂದಲೇ ಓದುತ್ತಿದ್ದೆ ನನಗೆ ಓರಿಯರು ಆಗೀಗ ಕೊಡಿಸಿದಾಗ ಸಿಗಬೇಕು ಆ ಸಮಯಕ್ಕೆಲ್ಲ ಒಂದಿಷ್ಟು ಗಂಭೀರವಾದ ಓದು ಪ್ರಾರಂಭವಾಗುತ್ತದೆ. ಆದರೆ ಇದು ಕೆಲ ವಿಶಿಷ್ಟ ಪರಿಸರದಲ್ಲಿ ಬೆಳೆಯುವ ಮಕ್ಕಳಿಗೆ ಸಾಧ್ಯವಾಗುತ್ತದೆ. ಈ ಚಂದಾಮಾಮದ ಹುಚ್ಚು ಹಿಡಿಸುವ ಕತೆಗಳು ಏನೇನೆಲ್ಲ ಹೇಳುತ್ತವೆ. ಏಕೆಲ್ಲ ಆಕರ್ಷಿಸುತ್ತವೆ ಎನ್ನುವುದೇ ವಿಶೇಷವಾದದ್ದಾಗಿದೆ. ಆ ಕತೆಗಳಲ್ಲಿ ಮುಗಿದು ಹೋಗುವ ಒಂದು ವಿಶಿಷ್ಟ ಘಟನೆ ಇರುತ್ತದೆ. ಆದರೆ ಅದರ ಆಗುಹೋಗುಗಳು ಹಿಂದು ಮುಂದುಗಳು ಎಲ್ಲ ನಮ್ಮ ಮುಂದೆ ಇರುತ್ತವೆ ಹೀಗಾಗಿ ಒಂದು ಬಗೆಯ ಕುತೂಹಲವಿರುತ್ತದೆ. ನಮ್ಮಿಂದ ಬೇರೆಯಾದ ರಾಜರ ಕತೆಗಳಿರುತ್ತವೆ. ನಮ್ಮಂತಹ

ಸಾಮಾನ್ಯ ಪಾತ್ರಗಳು ಇದ್ದರೂ ಏನೋ ಅವುಗಳದೇ ವೈಚಿತ್ರ್ಯಗಳಿರುತ್ತವೆ. ಒಂದು ಘಟನೆಯಲ್ಲೇ ಆಕರ್ಷಿಸುವ ಕುತೂಹಲಕರ ವಾತಾವರಣವಿರುತ್ತದೆ. ಮಂತ್ರ ಮಾಡಿದ ಅದ್ಭುತ ಜಗತ್ತಿನ ಬಗೆಗಳಂತೂ ಸರಿಯೋ ಸರಿ ತೀರ ದಡ್ಡರು ಹಾಸ್ಯಕ್ಕೆ ಒಳಗಾಗುವರು ಜಾಣರು ಅಂತು ನಮ್ಮದೊಂದು ಬೇರೆಯು ದೇ ಆದ ಲೋಕದಲ್ಲಿಳಿಸುತ್ತವೆ, ಈ ಕತೆಗಳು ಇಂದು ಜನಪದ ಕತೆಗಳನ್ನ ವಿಶ್ವವಿದ್ಯಾಲಯ ಮಟ್ಟದಲ್ಲಿ ಅಧ್ಯಯನ ಮಾಡುತ್ತಿದ್ದು ಅವುಗಳ ವಿಶಿಷ್ಟ ಆಶಯಗಳನ್ನು ಗುರುತಿಸಲಾಗುತ್ತಿದೆ. ರಚನೆಯ ಬಗೆಗೆ ಅಭ್ಯಸಿಸಲಾಗುತ್ತಿದೆ.

ಇಂಥ ಕತೆಗಳನ್ನೆಲ್ಲ ಜನಪದರು ಮಕ್ಕಳಿಗಾಗಿಯೇ ಮಾಡಿದವರಲ್ಲ ಇವು ಎಲ್ಲರಲ್ಲಿಯೂ ಬಳಕೆಗೆ ಬಂದಂಥವು ಒಂದು ಕತೆ ಮಕ್ಕಳಮಧ್ಯ ಇರುವಾಗ, ಹಿರಿಯರ ನಡುವಿರುವಾಗ, ಅದರಲ್ಲೂ ಪುರುಷರ ನಡುವೆ. ಸ್ತ್ರೀಯರ ನಡುವಿರುವಾಗ ತನ್ನ ಸ್ವರೂಪವನ್ನೂ ಬದಲಿಸಿಕೊಳ್ಳುತ್ತದೆ. ಬಹುಶಃ ಹೀ-ಗೆಯೇ ಈ ಜನಪದ ಕತೆಗಳು ಬೇರೆ ಬೇರೆಯಾಗಿ ಬಳಕೆಯಾಗುತ್ತ ಬಂದಿರಬೇಕು. ಆದರೆ ಕೆಲಕತೆಗಳಿವೆ ಅವು ಕೇವಲ ಹಿರಿಯರಲ್ಲಿ ಮಾತ್ರ ಬಳಕೆಯಲ್ಲಿರುವಂಥವು ಉದಾಹರಣೆಗೆ ಲೈಂಗಿಕ ಆಸಕ್ತಿಯ ಕತೆಗಳು ವಿಚಿತ್ರವಾದ ಅದ್ಭುತ ಸಂಗತಿಗಳು ಇಂಥವುಗಳಲ್ಲಿದ್ದರೂ ಮಕ್ಕಳಿಗೆ ಖಂಡಿತಾ ಆಪ್ಯಾಯಮಾನವಾದುದಲ್ಲ ಹೀಗೆಯೇ ಈ ಕಥಾ ಪ್ರಪಂಚದಲ್ಲಿ ಮಕ್ಕಳ ತಲೆಗೆ ಹೋಗಲಾ-ರದ. ಹಿಡಿಸಲಾರದ, ಅನೇಕ ಬಗೆಯುವಿರುವ ಸಾಧ್ಯತೆಯಿದೆ. ಜನಪದ ಕತೆಗಳನ್ನು ಮಕ್ಕಳಿಗಾಗಿ ಬರೆದು ಪ್ರಕಟಪಡಿಸುವ] ತರಾತುರಿ ಇಂದು ಅನೇಕರಲ್ಲಿ ಕಾಣುತ್ತಿದೆ, ಆದರೆ ಆ ಕತೆ ಮಕ್ಕಳಿಗೆ ಸರಿಹೊಂದಬಲ್ಲದೆ ಇಲ್ಲವೇ ವಿಚಾ-ರಿಸಬೇಕಾದ್ದು ಅಗತ್ಯವಾಗಿದೆ.



ನಡುಗಡ್ಡೆ

– ಪ್ರಭು ಖಾನಾಪುರೆ

ಎತ್ತರದ ಮೇಲೊಂದು ಮನೆ
ಹತ್ತಿ ಒಳಸೇರುವುದೆ ಒಂದು " ಕಲೆ "
ಬೆಳೆದು ನಿಂತಿದೆ ಹುಲ್ಲ
ಸುತ್ತ ವಿಷದ ಬೇಲಿ ಮುಳ್ಳ.

ಇದು ಕೂಪ ಮಂಡೂಕರ ಕಣಿ
ಮೌನ ನುಂಗಿದ ನಡುಗಡ್ಡೆ
ಹುಚ್ಚು ಹವ್ಯಾಸಗಳ ಕಿಚ್ಚುಯೆದೆಯೊಳಗೆ

ವಿಕೃತ ಕಾಮದ ಸೆಲೆ
ಕತ್ತೆಗೂ ಕಸ್ತೂರಿ ಮೃಗದ ಬೆಲೆ
ಹುಲಿವೇಷದ ನರಿಗೂ ಬೇಟೆಯಾಡುವ ಭ್ರಮೆ.

ಮುದಿಗೂಬೆಗೂ ಹದಿಹರೆಯ ಚಾಟ
ಬಂಜೆಗೂ ಬಸಿರು ಮಾಡುವ ನೋಟ
ಸಂತಾನಗಳ ಹಂತಿ ಕಟ್ಟುವ ಪೈಶಾನರ ಕಾಟ

ಎಡಬಿಡದೆ ಹಗಲಿರುಳು
ಸುರಿಯುತ್ತದೆ ಸಾಹಿತ್ಯಿಕ ಮಳೆ
ವಾಂತಿ ಮಾಡಿಕೊಂಡರೂ-
ತುಂಬಿ ಹರಿಯುತ್ತದೆ ಕ್ರಾಂತಿಯ ಹೊಳೆ
ಷಂಡರಿಗೂ ಗಂಡಸರ ಕಳೆ

ಇಲ್ಲಿ ಕೆಲವರು ಹುಟ್ಟುತ್ತಲೆ ಸಾಯುತ್ತಾರೆ
ಮತ್ತೆ ಕೆಲವರು ಸತ್ತೆ ಹುಟ್ಟುತ್ತಾರೆ
ಹೆಚ್ಚಾಗಿ ಇಲ್ಲಿ ಸತ್ತವರೇ ಬದುಕುತ್ತಾರೆ.

ಈ ಮನೆಯ ಮಲ್ಲರು–
ಯಾವಾಗಲೂ ಕಿಟಕಿ ಬಾಗಿಲುಗಳನ್ನು
ಸದಾ ಮುಚ್ಚಿಕೊಂಡಿರುತ್ತಾರೆ.
ಹೊರಗಿನ ಗಾಳಿ ಬೆಳಕಿಗಂಜಿ.
ಮತ್ತೆ ಅವುಗಳ ಸಂದುಗಳಲ್ಲಿ ಕಣ್ಣಿಕ್ಕಿ
(ಯಾರಿಗೂ ಕಾಣದಂತೆ)
ಒಳಗೆ ಮರೆಯಾಗಿ ನಿಂತು
ನೋಡುತ್ತಲೇ ಇರುತ್ತಾರೆ ಹೊರ ಜಗತ್ತು.

ಕಡ್ಡಿ ಕೃತಗಳ ದಟ್ಟ ನೆರಳಿನಡಿ
ಮಲಗುತ್ತಾರೆ. ಎಚ್ಚರಿದ್ದರೂ ಹೊಚ್ಚಿಕೊಂಡು ಮುಸುಕು
ವಿಕಾರ ಕನಸುಗಳ ಹೊತ್ತ ವಿಕೃತ ಮನಸ್ಸು.

ಕತ್ತಲೆಯ ಕಲ್ಪವೃಕ್ಷದ ಕೆಳಗೆ
ಬತ್ತಲೆ ಬೀಳುತ್ತಾರೆ.
ಸ್ವಂತ ತೃಪ್ತಿಯಲ್ಲೆ ಸದಾ ಮುಳುಗೇಳುತ್ತಾರೆ,
ಕೀರ್ತಿ ಕಂದಕದಲ್ಲಿ ಕರಗಿ ಹೋಗುತ್ತಾರೆ.

ಆಕಾಶದಲ್ಲಿ ಅರಮನೆ ಕಟ್ಟಿ
ಕೈ ಗೂಡದ ಕನಸುಗಳನ್ನು ಮೈಗೂಡಿಸಿಕೊಳ್ಳುತ್ತಾರೆ
ಭಯದ ಬಿಳಲಿಗೆ ಬಾಂಬು ಹಾಕಿ
ತಮ್ಮ ಸುಖಕ್ಕೆ ಅನ್ಯರ ಬಲಿ ಕೊಡುತ್ತಾ
ಹೊರಲೋಕ ಮರೆತು
ಪರಲೋಕದ ಪ್ರಜ್ಞೆಯಲ್ಲಿ ಪಾವನಗೊಳ್ಳುತಾರೆ.

ಆತ್ಮರತಿಯ ಅಪ್ಪುಗೆಯಲ್ಲಿ ಆನಂದವನ್ನರಸುತ್ತ
ಹರಿದ ಕನಸುಗಳನ್ನು ಮಾರುತ್ತ
ತೊಟ್ಟು ಕಳಚಿದ ಮಾತುಗಳಿಗೆ ತಡವುತ್ತ
ಸಾಗಿದೆ ಪಯಣ ಕತ್ತಲೆಯ ಗೂಡಿಗೆ.



ಅವನು ಮಾತನಾಡುವದಿಲ್ಲ

- ಸೂಗಯ್ಯ ಹಿರೇಮಠ

ನಾನು ದಿನಾಲೂ ನೋಡುತ್ತೇನೆ
ಇವರು-
ಸದಾ ಬಿದ್ದ ಕಲ್ಲಿಗೆ
ಪೂಜೆ ಸಲ್ಲಿಸಿ
(ಮಂದಿರ ಕಟ್ಟಿಸಿ)
ಸುಖ ಜೀವನಕ್ಕಾಗಿ
ಭಜನೆ ಮಾಡುತ್ತಾರೆ !
ಅವನು ಮಾತನಾಡುವದಿಲ್ಲ.

ಅವರು-
ಪಾಳು ಬಿದ್ದ ನೆಲ
ಸ್ವಚ್ಛಗೊಳಿಸಿ
ಮಲ್ಲಿಗೆ ಹರಡಿ
ಶಾಂತಿ ಸಮಾನತೆಗಾಗಿ
ನೂರು ಹೊತ್ತು
ಪ್ರಾರ್ಥನೆ ಸಲ್ಲಿಸುತ್ತಾರೆ.
ಅವನು ಮಾತನಾಡುವದಿಲ್ಲ.
ಒಂದು ದಿನ
ಬಜಾರದಲಿ ಭೇಟಿ ಮಾಡಿದಾಗ
ಅವನ ಬಗ್ಗೆಯೇ
ಮಾತಿಗೆ ಮಾತು ಬೆಳೆದು
ಗುಂಪು ಕೂಡಿ
ಇರಿದು ಸಾಯಿಸುತ್ತಾರೆ !
ನನಗೀಗ ಅರ್ಥವಾಗಿದೆ.
" ಇವರು ಸಾಯುತ್ತಿದ್ದ
ಆಗಲೂ
ಅವನು ಮಾತನಾಡುವದಿಲ್ಲ
ಅವನು ಮಾತನಾಡುವದಿಲ್ಲ "
ಎನ್ನುವುದಕ್ಕಿಂತ
ಅವನಿಗೆ ಮಾತೇ ಬರುವದಿಲ್ಲ !

ನಾನೀಗ ಹಾಡಲಾರೆ

- ವಿಠ್ಠಪ್ಪ ಗೋರಂಟ್ಲಿ

ಹಾಡಲಾರೆ ನಾನೀಗ ನನ್ನ ನೋವಿನ ಹಾಡು
ಪಕ್ಕಿ ಕೂಗಿದ್ದು, ನದೀ ಕಾಡು ಗಿರಿ ಶಿಖರ
ಈ ಎಲ್ಲ ಕುರಿತು ಹಳೇ ಜಾಡು ಹಿಡಿದು
ಹಾಡಲಾರೆ ನಾನು

ಸುತ್ತೆಲ್ಲ ಆವರಿಸಿದ
ಬದುಕು ಸಮಸ್ಯೆಯು ಬಲೆ-
ಕಿತ್ತೆಸೆದು ಒರಲಾಗದೆ ಭಾವನೆಗಳ ಸೆಲೆ ಬತ್ತಿ
ಸತ್ತ ಹಾಗಾದಾಗ ಹಾಡಲಾರೆ ನಾನು

ನನ್ನವರ ಸುಂದರ ಮುಖದ
ಹಿಂದಿರುವ ಕುರೂಪ ಕಂಡು
ಸತ್ಯ ಹೇಳಲಾರದ ಭಯಕೆ
ಬಾಯಿ ಸತ್ತಂತೆ ಕುಳಿತಾಗ
ಹೇಗೆ ಹಾಡಲಿ ನಾನು

ಕ್ರಾಂತಿಗಾಗಿ ಶಬ್ದ ತಡಕಾಡಿ
ಇಡೀ ಸಮಾಜ ಬದಲಿಸುವ ಭ್ರಮೆಯಲ್ಲಿ-
ಹಾಡಿ ಮಾಡಲಾರೆ ಮೋಡಿ
ಬಿಗಿದಿದೆ ಕುತ್ತಿಗೆ
ತಲೆಯ ಮೇಲಿದೆ ಸುತ್ತಿಗೆ
ಬಾಯಿಗಿದೆ ಬೀಗ
ಅದಕ್ಕೀಗ ಹಾಡಲಾರೆನು ನಾನು.

ಹಸ್ತ ಪ್ರತಿ

– ಶಂಕರಯ್ಯ ಆರ್. ಘಂಟಿ.

ಗೆಳೆಯಾ
ನೀನಿತ್ತ ಮುತ್ತುಗಳು
ನೆನಪಿನ ಹಾಳೆಯಲಿ
ಮುಚ್ಚಿಹೋಗಿವೆ ಎಂದುಕೊಳ್ಳಬೇಡ.
ಅವು
ನನ್ನ ಮನಸಲ್ಲಿ
ಎಂದೆಂದಿಗೂ
ಅಳಿಸದೇ ಉಳಿವ
ಹಸ್ತ ಪ್ರತಿ

ನನ್ನಾಕೆ ಅಂದಿದ್ದು....

ನನ್ನಾಕೆ ಅಂದ್ಳು...
ನೀವು ಆಬಿಬಿ ಹಂಗ್ಯಾಕ ಸಿಕ್ಕಂಗs ಬಗೀತೀರಿ ?
ನಾನಂದೆ-
ಮನಿಯೊಳಗೆ ನೋಡುವವರು
ಇನ್ನೊಬ್ಬರಿದ್ದಾರೆ... ಅಂತ
ಮಾತು ಮತ್ತೆ ಮೌನ
ಒಳಗೆ ಬಿಗುಮಾನ
ಕಣ್ಣು ಹೇಳಿದ್ದು
ಹೂಂ... ಗಂಡಸ್ ಜಾತೀನೇ ಇಷ್ಟು.

ಸಂಸ್ಕೃತ ಸಾಹಿತ್ಯದಲ್ಲಿ ಸ್ತ್ರೀ

● ಮಹಾಂತಪ್ಪ ಜಾಗಟಿ

ಗದ್ಯ, ಪದ್ಯ, ವ್ಯಾಕರಣ, ಛಂದಸು ಮುಂತಾದ ಪರಿಕರಗಳ ಮಾಧ್ಯಮದಿಂದ, ನಿರ್ದಿಷ್ಟವಾದ ಕಥಾವಸ್ತುವೊಂದಿಟ್ಟುಕೊಂಡು, ಸೂಕ್ತವಾದ ವರ್ಣನೆಯೊಂದಿಗೆ ವಿವರಣೆಗೊಡುತ್ತ, ಕೃತಿ-ಕರ್ತೃ ತನ್ನ ಅಭಿಪ್ರಾಯವನ್ನು ಸುರಳಿ-ಸುರಳಿಯಾಗಿ ಬಿಚ್ಚುತ್ತಾ, ನಡುನಡುವೆ ಮನರಂಜಿಸುತ್ತ ಮುಂದೆ ಸಾಗುತ್ತಾನೆ. ತನ್ನಅಭಿಪ್ರಾಯ ಮಂಡನೆಯಕಾರ್ಯ ಸಂಪೂರ್ಣವಾದ-ನಂತರವೇ, ಕೃತ-ಕೃತ್ಯತೆಯ ಉಸಿರುಬಿಡುತ್ತಾನೆ. ಇಚ್ಛಿತಕಾರ್ಯ ಸಾಧನೆ ಮಾಡಿದ ನೆಮ್ಮದಿ ಆತನದಾಗುತ್ತದೆ. ಆತನ ಪಾಲಿಗೆ ಅದೊಂದು ಸಿದ್ಧಿಸಿದ ತಪಸ್ಸು, ಸಾಹಿತ್ಯಕ್ಕೆ - ಸಮಾಜಕ್ಕೆ ಕೊಟ್ಟಕೊಡುಗೆ.

ಸಾಹಿತ್ಯದ ಮೇಲಿನ ಸ್ತರದಲ್ಲಿ ಬರುವ ವೇದ, ಉಪನಿಷತ್ತು ಹಾಗೂ ಭಗವದ್ಗೀತೆಗಳು ಉಪಲಬ್ಧವಿದ್ದರೂ, ಅವುಗಳ ಕಾಲ – ಕರ್ತೃಗಳ ಬಗ್ಗೆ ನಿಖರವಾದ ದಾಖಲೆಗಳಿಲ್ಲ, ಅವುನಮ್ಮಪ್ರಮಾಣ ಗ್ರಂಥಗಳು ಆದಾಗ್ಯೂ, ಒಂದು ಕಾಲದ ಸತ್ಯ ಮುಂದಿನ ಮತ್ತೊಂದು ಕಾಲದಲ್ಲಿ ಅಸತ್ಯವಾಗಿ ಪರಿಣಮಿಸಬಹುದು. "ಬೈಬಲಿನಲ್ಲಿ ಸೂರ್ಯ ಭೂಮಿಯ ಸುತ್ತಲೂ ತಿರುಗುತ್ತಾನೆ ಎಂಬ ಉಲ್ಲೇಖವಿದೆ." ಇಂದು ಯಾರಾದರೂ ಈ ಮಾತನ್ನು ಹೇಳಿದರೆ ಜನ ಅವನನ್ನು ಹುಚ್ಚನೆನ್ನುತ್ತಾರೆ. "ಈ ಮಾತನ್ನು ಹೇಳಿಯೇ ಗೆಲಿಲಿಯೋ ಅಪಮಾನಕ್ಕೀಡಾದ, ಶಿಕ್ಷೆಗೆಗುರಿಯಾದ, ಬೈಬಲ ವಿರೋಧಿ, ಧರ್ಮವಿರೋಧಿ ಎಂಬ ಬಿರುದನ್ನು ಪಡೆದ."

ಸಂಸ್ಕೃತವನ್ನು, ದೇವಭಾಷೆ ಎನ್ನುತ್ತಾರೆ ಈ ಭಾಷೆಯಲ್ಲಿ ಮಹಾ-ಮಹಾ ಕಾವ್ಯಗಳ ರಚನೆಯಾಗಿದೆ. ಆ ಕಾಲದಲ್ಲಿ ವರ್ಣಾಶ್ರಮ ಧರ್ಮ ಜಾರಿಯಲ್ಲಿತ್ತು. ಕ್ಷತ್ರಿಯ. ಬ್ರಾಹ್ಮಣ, ವೈಶ್ಯ ಮತ್ತು ಶೂದ್ರರು. ಶೂದ್ರರಿಗೆ ಸಮಾಜದಲ್ಲಿ ಹೆಚ್ಚಿನ ಸ್ಥಾನಮಾನಗಳಿರಲಿಲ್ಲ. ರಾಮಾಯಣ ಬರೆದ ಕವಿ ವಾಲ್ಮೀಕಿ, ಮಹಾಭಾರತ ಬರೆದ ವ್ಯಾಸ, ಅನೇಕ ಕಾವ್ಯ ನಾಟಕಗಳನ್ನು

ಬರೆದ ಕಾಳಿದಾಸ ಇವರೆಲ್ಲ ಶೂದ್ರರ ಗುಂಪಿಗೆ ಸೇರಿದವರು. ಇವರ ಕುಲ-ಗೋತ್ರಗಳು ಬೆಳಕಿಗೆ ಬಾರದಿರಲೆಂದೇ, ನದೀ ಮೂಲ, ಋಷಿ ಮೂಲ ಹುಡುಕಬೇಡಿ ಎಂದು ಆರ್ಯ ಸಂಸ್ಕೃತಿಯ ಜನ ಹೇಳಿದರು, ಸರಿ ಬಿಡಿ, ಇಲ್ಲಿ ನಮ್ಮ ಜಿಜ್ಞಾಸೆಗೆ ಅವಕಾಶ ವಿಲ್ಲ.

ಸಂಸ್ಕೃತ ಸಾಹಿತ್ಯದಲ್ಲಿ ಸ್ತ್ರೀ ಶೋಷಣೆಯ ಮಹಾಪೂರವೇ ಹರಿದಿದೆ. "ನಸ್ತ್ರೀ ಸ್ವಾತಂತ್ರ್ಯಂ ಅರ್ಹತಿ" ಎಂದರು ಉಪನಿಷತ್ ಕಾರರು ಮುಂದೆ "ಮಾತೃದೇವೋಭವ" ಎಂದು ತಾಯಿಗೆ ದೇವತೆಯ ಪಟ್ಟಗಟ್ಟಿ-ದವರೂ ಇವರೇ, ಓದುಗನ ಮನ ಇಲ್ಲಿ ದ್ವಂದ್ವಕ್ಕೀಡಾಗುತ್ತದೆ. ದೇವತೆ ಎನಿಸಿಕೊಂಡ ತಾಯಿಯೂ ಸ್ವಾತಂತ್ರ್ಯಕ್ಕೆ ಅನರ್ಹಳೇ ? ಯಾಕೆಂದರೆ ಅವಳೂ ಕೂಡ ಸ್ತ್ರೀಯೇ, ಇಷ್ಟಕ್ಕೆ ನಿಲ್ಲದೇ ಸ್ತ್ರೀಯ ಚಲನವಲನದ ಬಗ್ಗೆ ಲಕ್ಷ್ಮಣ ರೇಖೆಯನ್ನೆಳೆದು ಅವಳು ಹೀಗೆಯೇ ಇರಬೇಕು ಎಂದು ನೀತಿ ಸಂಹಿತೆಯನ್ನು ಮಾಡಿದ್ದಾರೆ. ಕಾರ್ಯಸ್ಯ ಮಂತ್ರಿ, ಕರಣಸ್ಯ ದಾಸಿ, ಭೋಜ್ಯಸ್ಯ ಮಾತಾ, ಶಯನಸ್ಯ ರಂಭಾ, ಕ್ಷಮಯ ಧರಿತ್ರಿ ಇದು ಸ್ತ್ರೀಯ ಸ್ವಾತಂತ್ರ್ಯ ಹರಣವೇ ಸರಿ.

ಇನ್ನು ಆ ಕಾಲದ ಗಂಡುಗಳು ಹಚ್ಚಗಿದ್ದಲ್ಲಿ ಮೇದು, ಬೆಚ್ಚಗಿದ್ದಲ್ಲಿ ಮಲಗಿ ಸುಖ ಪಡಲು ಅವಕಾಶವಿತ್ತು, ಹೆಚ್ಚು ಜನ ಹೆಂಡಂದಿರನ್ನು ಮಾಡಿ-ಕೊಂಡರೆ ಜೋಡುಕೋಡು ಮಾಡಿದಂತೆ, ಅವರಿಗೆ ಯಾವನೀತಿ ಸಂಹಿತೆಯೂ ಇರಲಿಲ್ಲ. ಕಾರಣ ಈ ನಿಯಮವನ್ನು ಮಾಡಿದವರು ಗಂಡಸರೇ.

ರಾಮಾಯಣ ಮಹಾಭಾರತಗಳ ಬಗ್ಗೆ ಒಂದು ಮಾತು. ಮರ್ಯಾದಾ ಪುರುಷೋತ್ತಮನೆನಿಸಿಕೊಂಡ ಶ್ರೀರಾಮಚಂದ್ರ, ರಾವಣನ ಲಂಕೆಯಲ್ಲಿ ಇದ್ದು ಬಂದ ಸೀತೆಯನ್ನು ಅಗ್ನಿಪರೀಕ್ಷೆಗೆ ಗುರಿಮಾಡಿ, ಪವಿತ್ರಳೆಂದು ಖಚಿತಪಡಿಸಿಕೊಂಡೇ ಸ್ವೀಕರಿಸುತ್ತಾನೆ. ಮುಂದೆ ಅಗಸನ ಮಾತಿಗೆ ಬೆಲೆಕೊಟ್ಟು ಗರ್ಭಿಣಿಯಾದ ಸೀತೆಯನ್ನು ಅಡವಿಗೆ ಕಳಿಸುತ್ತಾನೆ. ಈ ಘಟನೆಗೆ ಕಾರಣ ಏನೇ ಇರಬಹುದು. ಆದರೆ ಇಲ್ಲಿ ಬೆಂಕಿಯಲ್ಲಿ ಬಿದ್ದು, ಅಡವಿಯಲ್ಲಿದ್ದು ಇಡಿ-ಬಾಳನ್ನೇ ಕಣ್ಣೀರ ಕಾಸಾರದಲ್ಲಿ ಕಳೆದವಳು ಸೀತೆ ತಾನೇ, ಅಶಿಕ್ಷಿತ ಸ್ತ್ರೀ ಸೂರ್ಪನಖಿ ತಪ್ಪಾಗಿ ನಡೆದುಕೊಂಡಿರಬಹುದು, ಅಂದಮಾತ್ರಕ್ಕೆ ಅವಳ ಮೂಗು ಮುಡಿಯನ್ನೇ ರಾಮ ಲಕ್ಷ್ಮಣರು ಕತ್ತರಿಸಬೇಕೇ ? ಇದು ಹೆಣ್ಣಿನ ಶೋಷಣೆಯಲ್ಲದೆ ಮತ್ತೇನು, ಹೆಂಡತಿಯ ಸ್ವಭಾವಕ್ಕೆ ಹೊಂದಿಕೊಳ್ಳಲಾಗದ ಉದ್ದಾಲಕ ಮಹರ್ಷಿ ತಮ್ಮ ಹೆಂಡತಿ ಚಂಡಿಗೆ ಕಲ್ಲಾಗೆಂದು ಶಾಪವಿತ್ತರು.

ಜಮದಗ್ನಿ ಮಹರ್ಷಿಗಳು ಮಗ ಪರಶುರಾಮನಿಂದಲೇ ತನ್ನ ಹೆಂಡತಿ ರೇಣುಕೆಯು ಕೊಲೆ ಮಾಡಿಸಿದರು. ಇವೆಲ್ಲ ದೊಡ್ಡವರು ಮಾಡಿದ ಗುಡ್ಡ-ದಂತಹ ತಪ್ಪುಗಳು. ಇನ್ನು ಚಿಕ್ಕ ಪುಟ್ಟವರು ಮಾಡಿದ ಅಮಾಯಕ ತಪ್ಪು ಗಳಿಗೆ ಲೆಕ್ಕವೇ ಇಲ್ಲ.

ಒಲಿದರೆ ನಾರಿ, ಮುನಿದರೆ ಮಾರಿ ಎಂಬ ಮಾತು ಮಹಾಭಾರತದ ದ್ರೌಪತಿಯಿಂದಲೇ ಬಂದಿರಬೇಕು. ವಿರಾಟರಾಜನ ಅರಮನೆಯಲ್ಲಿ ಸೈರಂಧ್ರಿಯ ವೇಷದಲ್ಲಿರುವ ಛದ್ಮವೇಶಧಾರಿ ದ್ರೌಪತಿಯನ್ನು ಕಂಡು ಕೀಚಕನ ಕಾಮ ಕೆರಳುತ್ತದೆ. ತನ್ನ ಅಕ್ಕನ ಮನೆಯಲ್ಲಿ ಕೆಲಸಕ್ಕಿರುವ ಸೈರಂಧ್ರಿ ಅಸಹಾಯಕಳೆಂದು ಬಗೆದು ಅತ್ಯಾಚಾರಕ್ಕೆ ಎಸಗ ಬಯಸುತ್ತಾನೆ. ಕೊನೆಯಲ್ಲಿ ಸಾವನ್ನಪ್ಪುತ್ತಾನೆ.

ಯತ್ರ ಪೂಜ್ಯಂತಿ ನಾರ್ಯಾಸ್ತು ತತ್ರರಮಂತು ದೇವತ :
ಎಂದ ನಾಡಿನಲ್ಲಿಯೇ ನಾರಿಯನ್ನು ನಡೆಸಿಕೊಂಡ ರೀತಿ ಇದೆಂದರೆ
ಎಂತಹ ವಿಪರ್ಯಾಸ.

ಇನ್ನು ಮುಂದಿನ ದೃಶ್ಯ ಅತಿ-ಭಯಂಕರ ಎದೆ ನಡುಗಿಸುವಂತಹ ಹೃದಯ ವಿದ್ರಾವಕ ಸನ್ನಿವೇಶ "ದ್ರೌಪತಿಯ ವಸ್ತ್ರಾಪಹರಣ" ಪಿತಾಮಹ ಭೀಷ್ಮ, ಗುರುದ್ರೋಣ ಧೃತರಾಷ್ಟ್ರ, ಗಾಂಧಾರಿ, ಪಂಚಪಾಂಡವರು, ಕರ್ಣ, ದುರ್ಯೋಧನ ಮುಂತಾದವರಿಂದ ಕಿಕ್ಕಿರಿದು ತುಂಬಿದ ರಾಜಸಭೆಯಲ್ಲಿ, ಬಹಿಷ್ಟೆಯಾದ ಒಂಟಿ ಬಟ್ಟೆಯಲ್ಲಿದ್ದ ಪಾಂಡವರ ಪಟ್ಟಮಹಿಷಿ ದ್ರೌಪತಿಯ ವಸ್ತ್ರಾಪಹರಣ ಕಾರ್ಯ ಅದೂ ಮೈದುನ ದುಶ್ಯಾಸನಿಂದ ಇಂಥ ನೀಚ ಕಾರ್ಯ ಸರ್ವದಾನಿಂದನೀಯ, ಇದು ಹೆಣ್ಣಿನ ಶೋಷಣೆಗೆ ಕಿರೀಟವಿಟ್ಟಂತೆ.

ಮಹಾಭಾರತದಲ್ಲಿ ಧರ್ಮಕ್ಕೆ ಹೆಸರಾದ, ಧರ್ಮರಾಜನೆನಿಸಿಕೊಂಡ ಪುಣ್ಯಾತ್ಮ ಹೆಂಡತಿಯನ್ನು ಒಂದು ನಾಣ್ಯದಂತೆ, ಜೂಜಿನಪಣಕ್ಕೆ ಹಚ್ಚಿದ ತಪ್ಪುಂದಿರು ಬೇಡವೆನ್ನಲಿಲ್ಲ. ಇದು ಅವರು ಹೆಣ್ಣಿಗೆ ಕೊಟ್ಟಬೆಲೆ "ದೇವೋ ದುರ್ಬಲ ಘಾತಕ" ಹಾಗಾದರೆ ದೇವರೂ ಕೂಡ ದುರ್ಬಲರನ್ನು ಮಾತ್ರ ಘಾತಿಸುತ್ತಾನೆಯೇ. ಇವೆಲ್ಲ ದ್ವಂದ್ವಕ್ಕೆಡೆಮಾಡುವ ಹೇಳಿಕೆಗಳು.

ಕನ್ನಡ ಸಾಹಿತ್ಯ ಅನೇಕ ಮಜಲುಗಳನ್ನು ದಾಟಿ ಇಂದಿನ ಸ್ಥಿತಿಗೆಬಂದಿದೆ. ಶಿವಕೋಟ್ಯಾಚಾರ್ಯರ ವಡ್ಡಾರಾಧನೆ ಗದ್ಯ ಕಾವ್ಯ ಕರ್ತೃವಿನ ಬಗ್ಗೆ ಭಿನ್ನಾಭಿಪ್ರಾಯವಿರುವ "ಕವಿರಾಜ ಮಾರ್ಗ" ಒಂದು ಲಾಕ್ಷಣಿಕ ಕಾವ್ಯ ಮುಂದೆಬರುವ

ಪಂಪ, ರನ್ನ, ಪೊನ್ನ, ಜನ್ನ, ನಾಗಚಂದ್ರ, ನೇಮಿಚಂದ್ರ, ರತ್ನಾಕರವರ್ಣಿ ಇವರೆಲ್ಲ ಜೈನ ಕವಿಗಳು. ಇವರು ಒಂದು ಧಾರ್ಮಿಕ ಕಾವ್ಯ ಒಂದು ಲೌಕಿಕ ಕಾವ್ಯ ಬರೆಯುವ ಸಂಪ್ರದಾಯವಾದಿಗಳಾಗಿ ಚಂಪೂ ಶೈಲಿಯಲ್ಲಿ ಕಾವ್ಯ ರಚನೆ ಮಾಡಿದರು. ಸಂಸ್ಕೃತ ಭೂಯಿಷ್ಠ, ಚಂಪೂಶೈಲಿ ಶ್ರೀಸಾಮಾನ್ಯನ ಪಾಲಿಗೆ ಉಕ್ಕಿನ ಕಡಲೆಯಾಗಿ, ರಾಜಾಶ್ರಯದ ಸೊತ್ತಾಗಿ ಜನರಿಂದ ದೂರ ಉಳಿಯಿತು.

ಇದರ ಮುಂದಿನ ಮಜಲು ಷಟ್ಪದಿಕಾರರ ಕಾಲ. ಈ ಕಾಲದ ಪ್ರಮುಖರಾದ ಕುಮಾರವ್ಯಾಸ, ಚಾಮರಸ, ರಾಘವಾಂಕ, ಲಕ್ಷ್ಮೀಶ ಮುಂತಾದವರು. ಈ ಕಾಲದಲ್ಲಿ ರಚಿತವಾದ ಸಾಹಿತ್ಯ ಜನಮನವನ್ನು ಸೂರೆಗೊಂಡವು. ಇವರ ಕಾವ್ಯಗಳು ಮನೆ-ಮನೆಯಲ್ಲೂ ಪಾರಾಯಣ ಮಾಡುವಂತಾದವು. ಅರಸುಗಳಿಗಿದು ವೀರ, ದ್ವಿಜರಿಗೆ ಪರಮವೇದದ ಸಾರ ಮಂತ್ರಿಜನಕೆ ಬುದ್ಧಿಗುಣ ವಿರಹಿಗಳ ಶೃಂಗಾರ, ಪರಿಣತರಲಂಕಾರ ಕಾವ್ಯಕ್ಕೆ ಗಾರವೆನ್ನಲು ರಚಿಸಿದ ಕವಿ ಕುಮಾರವ್ಯಾಸ ಭಾರತವ ಎಂದು ಕುಮಾರವ್ಯಾಸ ಹೇಳಿದರೆ,

ಸತ್ತ್ವಪರ ಕಥೆಯಲ್ಲ, ಜನನದ ಕುತ್ತದಲಿ, ಕಾಡಿಕುದಿದು, ಕರ್ಮದ ಕತ್ತಲೆಗೆ ಸಿಲುಕುವರ ಸೀಮೆಯು ಹೊಲಬುತಾನಲ್ಲ, ಹೊತ್ತು ಹೋಗದೆ ಪುಂಡರಾಲಿಪ ಮತ್ತ ಮತಿಗಳ ಗೋಷ್ಠಿಯಲ್ಲಿದು ಸತ್ಯಶರಣರು ಕೇಳಿದು ಲಾಲಿಸುವುದೇ ಪ್ರಭುಲಿಂಗಲೀಲೆಯನು ಎನ್ನುತಾನೆ, ಚಾಮರಸ. ಓಗೇ ಓತ-ಪ್ರೋತವಾಗಿ ಹರಿದಿದೆ ಕಾವ್ಯ ರಸ.

ಮೂರನೆಯ ಮಜಲೇ ವಚನಕಾರರ ಕಾಲ. ಈ ಅವಧಿಯನ್ನೇ ಕನ್ನಡ ಸಾಹಿತ್ಯದಲ್ಲಿ ಸಮೃದ್ಧಿ ಕಾಲ ಎನ್ನಬಹುದು. ಅನೇಕ ಜನ ಶರಣ-ಶರಣೆಯರು ತಮ್ಮ ಜೀವನದ ಅನುಭವವನ್ನೆ ವಚನರೂಪದಲ್ಲಿ ರಚನೆ ಮಾಡಿದರು. ಇಲ್ಲಿ ಕಟ್ಟು ಕಥೆಗಳಾಗಲಿ, ಕಲ್ಪನೆಯ ಭ್ರಮಾಲೋಕಕ್ಕಾಗಲಿ ಆಸ್ಪದವೇ ಇಲ್ಲ. ಸಮಾಜದಲ್ಲಿಯ ಓರೆ-ಕೋರೆಗಳನ್ನು ನಿರ್ದಾಕ್ಷಿಣ್ಯವಾಗಿ ತಮ್ಮ ವಚನಗಳ ಮೂಲಕ ಖಂಡಿಸಿದರು. ಶರಣರ ಈ ವಚನಗಳನ್ನು ಕನ್ನಡದ ಉಪನಿಷತ್ತುಗಳೆನ್ನಬಹುದು. ಈ ಶೈಲಿಯೂ ಸಹ ಕೆಲವೊಂದು ಸಲ ದ್ವಂದ್ವಕ್ಕೆಡೆಮಾಡಿಕೊಡುತ್ತದೆ. ಉಪನಿಷತ್ತಿನಲ್ಲಿ ಬರುವ ನಚಿಕೇತನ ಕಥೆಯನ್ನು ಓದುವಾಗ ಒಂದು ಪ್ರಸಂಗ –

"ಅಪ್ಪ ನನ್ನನ್ನು ಯಾರಿಗೆ ದಾನವಾಗಿ ಕೊಡುತ್ತೀಯಾ ?
ಎಂದು ಬಾಲಕ ನಚಿಕೇತನ, ತಂದೆಯನ್ನು ಕೇಳಿದಾಗ,
ಮುಂಗೋಪಿಯಾದ ತಂದೆ, ನಿನ್ನನ್ನು ಯಮನಿಗೆ ದಾನವಾಗಿ
ಕೊಟ್ಟಿದ್ದೇನೆ ಎಂದನಂತೆ"

ಬಾಲಕ ನಚಿಕೇತನ ನೇರವಾಗಿ ಯಮಲೋಕಕ್ಕೆ ಹೋಗಿ, ಯಮನ ಬಾಗಿಲನ್ನು ಕಾಯುತ್ತಾ ಕುಳಿತನಂತೆ. ಈ ಪ್ರಸಂಗ ಓದಲು ಚೆನ್ನ, ತುಂಬ ಸ್ವಾರಸ್ಯಕರ. ಇದರ ಸೃಜತೆಯ ಬಗ್ಗೆ ಚಿಂತನೆಮಾಡಿದಾಗ, ಕೊಂಚ ಅಧೀರರಾಗುತ್ತೇವೆ. ಸಂಶಯದ ಭೂತ ನಮ್ಮ ಮುಂದೆ ಬಂದು ನಿಲ್ಲುತ್ತದೆ. ಯಮಲೋಕವೆನ್ನುವದೊಂದು ಪ್ರತ್ಯೇಕ ಲೋಕವಿದೆಯೇ ? ಯಮನಿಗೂ ಮನೆ ಇದೆಯೇ, ಸಂಸಾರವಿದೆಯೇ, ಇದ್ದರೆ ಅದನ್ನು ಕಂಡುಬಂದವರಾರು ? ಉತ್ತರ ದೊರಕುವದು ಕಷ್ಟ. ಅದಕ್ಕಾಗಿಯೇ ಅನುಭಾವಿಗಳಾದ ಶರಣರು "ಸ್ವರ್ಗಲೋಕ ಮರ್ತ್ಯಲೋಕ ಬೇರಿಲ್ಲ ಕಾಣಿರೋ, ಸತ್ಯವ ನುಡಿವದೇ ಸ್ವರ್ಗಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ" ಎಂದು ಸಾರಿದರು. ಅದಕ್ಕಾಗಿಯೇ ಶರಣರ ವಚನಗಳನ್ನು ಉಪನಿಷತ್ತುಗಳಿಗಿಂತಲೂ ಶ್ರೇಷ್ಠ ಎನ್ನಬಹುದು. ಜಾತಿ, ಮತ, ಧರ್ಮಗಳ ಭೇದವಿಲ್ಲದೆ, ಹೆಣ್ಣು ಗಂಡೆಂಬ ತಾರತಮ್ಯವಿಲ್ಲದೆ ಎಲ್ಲ ಶರಣ-ಶರಣೆಯರೂ ತಮ್ಮ ಅನುಭವದ ಆಣಿ-ಮುತ್ತುಗಳನ್ನು ಪವಣಿಸಿ ಕನ್ನಡ ಸಾಹಿತ್ಯ ಸಿರಿದೇವಿಯ ಮುಡಿಗರ್ಪಿಸಿದ್ದಾರೆ. ಕನ್ನಡವನ್ನು ಸಮೃದ್ಧಗೊಳಿಸಿದ್ದಾರೆ. ಇದು ಜನಸಾಮಾನ್ಯರಿಗೂ ತಿಳಿಯುವ ವಚನ ಮಾಧ್ಯಮವಾದುದರಿಂದ ಸಮಾಜದಲ್ಲಿ ಅದ್ಭುತವಾದ, ಕಂಡರಿದಂತ ಬದಲಾವಣೆಗಳಾದವು. ಕಾಯಕವೇ ಕೈಲಾಸ ಎಂಬುದು ಆ ಜನರ ಜೀವನದ ಉಸಿರಾಯಿತು. ದುಡಿಯದೇ ತಿನ್ನುವುದು ಮಹಾಪಾಪ ಎಂಬ ಅರಿವು ಅವರಲ್ಲಿ ಬೇರೂರಿತು.' ಇದೇ ನಿಜವಾದ ಸಾಹಿತ್ಯ, ಸಾಹಿತ್ಯದಿಂದ ಸಮಾಜದಲ್ಲಿ ಆರೋಗ್ಯಕರ ಬದಲಾವಣೆಯಾಗಬೇಕು. ಸಾಹಿತಿಗಳು ಸಮಾಜದ ಅವಶ್ಯಕತೆಗನುಗುಣವಾಗಿ ಸ್ಪಂದಿಸಬೇಕು.

ಸಂಸ್ಕೃತ ಕವಿಗಳು ಭ್ರಮಾಲೋಕ-ಪ್ರಿಯರು. ವಾಸ್ತವಿಕ ಜೀವನಕ್ಕಿಂತ ಕಾಲ್ಪನಿಕ, ಅತಿ-ರಂಜಿತ ಜೀವನವೇ ಅವರಿಗೆ ಹೆಚ್ಚು ಇಷ್ಟ. "ಅಭಿಜ್ಞಾನ ಶಾಕುಂತಲ" ಒಂದು ದೃಶ್ಯ ಕಾವ್ಯ. ವಿಶ್ವಾಮಿತ್ರನ ತಪಸ್ಸು ಕಡಿಸಲೆಂದೇ ಇಂದ್ರ ಮೇನಕೆಯನ್ನು ಕಳಿಸುತ್ತಾನೆ. ಅವಳ ರೂಪ, ಯೌವನ,

ಛಳಿ ಸಿಡಿಮುತ್ತುಗಳು

– ಸೂರ್ಯಕಾಂತ ಪಾಟೀಲ, ಸರಸಂಬಾ

ನನ್ನ
ಚೆಲುವಿನ ಚಕೋರಿ
ಛಳಿಗೆ ಮುದುಡುತ್ತಾಳೆ
ಬಿಳಿಬಿಸಿಲಿಗೆ ಅರಳುತ್ತಾಳೆ.

ನನ್ನವಳಿಗೆ
ಛಳಿಯಲ್ಲಿ ಮುಟ್ಟಿದರೆ
ಹಿಮಕರಗಿದ ನೀರಾಗುತ್ತಾಳೆ
ನೀರಿಗಾದರೂ
ಮುತ್ತಿಡೋಣಾಂದ್ರ....
ಆವಿಯಾಗಿ ಮುಗಿಲೇರುತ್ತಾಳೆ.

ನೂರೆಂಟು
ಹೊದಿಕೆ ಹೊದ್ದುಕೊಂಡರೂ
ಛಳಿಯಿಂದ.. ಪರಿತಪಿಸುವ
ನೀನಗೆ
ಮನಶಾಂತಿಯಿಲ್ಲ.. ಹುಡುಗಿ
ನನ್ನದೇಹ ವಿಶಾಲ ಹೊದಿಕೆ
ನೀನಿಲ್ಲವೇ.. ಬರಿದಾಗಿದೆ
ಬರಲಾರೆಯಾ.. ಜಿಡಗಿ

ಛಳಿಯಿಂದ
ಛಿದ್ರಗೊಂಡ
ನಿನ್ನ ತುಟಿಕೆನ್ನೆಗಳ
ಲೇಪನಗೆ, ವ್ಯಾಸ್ಲೀನ್ ಅಷ್ಟೇ ಸಾಕೆ ?
ಇಲ್ಲಿ ನನ್ನ ಹಸಿದು ಹಂಬಲಿಸುತ್ತಿರುವ
ತುಟಿ ಮುತ್ತುಗಳೇನಾದರೂ ಬೇಕೆ ?

ಛಳಿಯು
ತುಂಟನೆಪ ಹೇಳಿ
ನನ್ನಿಂದ ಪರಾರಿಯಾಗಬೇಡ, ಹುಚ್ಚು ಹುಡುಗಿ
ಛಳಿ, ನಾಲ್ಕೇ ತಿಂಗಳಿನ ಹವಾಮಾನ
ನಾ, ಜೀವನದುದ್ದಕ್ಕೂ ನಿನ್ನ ಮನಮೋಹನ



ಮನೆಯ ನಕ್ಷೆ

ರವಿ ಹಿರೇಮಠ

ನನ್ನದೆನ್ನುವ ಗೂಡು
ಅಪ್ಪಿಕೊಂಡ ಅಮ್ಮನ
ಬೆಚ್ಚಗಿನ ಮಡಿಲು.

ಇಷ್ಟಗಲ ಜಾಗದಲಿ
ಕಟ್ಟುವ ಮನೆ
ಗೂಡಾಗುತ್ತಲ್ಲದೆ ಮತ್ತೇನು ?

ಆದರೆ ಮನೆಗಿಂತ "ಗೂಡು"
ತುಂಬ ಹಿತ ;
ಸುರಕ್ಷಿತ !

ಇರಲೊಂದು ಗೂಡ ಕಟ್ಟಲು
ಅಡಿಗಲ್ಲನ್ನಿಟ್ಟ ದಿನ
ಅದೆಷ್ಟೋ ಸಡಗರ ...

ಇಷ್ಟರಲ್ಲೇ ಒಂದು ಪುಟ್ಟ ಹಜಾರ ;
ಪ್ರೀತಿಯ ಮಂದಿಯೊಂದಿಗೆ
ಹರಟೆ ಹೊಡೆಯಲು
ನಕ್ಕು ನಲಿಯಲು
ಕೂತು ಉಣ್ಣಲು.

ಪಕ್ಕದಲ್ಲಿ ದೊಡ್ಡ ಕಿಟಕಿ
ಅಡುಗೆ ಕೋಣೆ
ಅಷ್ಟೇ ಅಗತ್ಯದ ಒಂದು
ಸ್ನಾನದ ಮನೆ.

ನನಗೆ
ನನ್ನ ಈ ಪುಸ್ತಕಗಳಿಗೆ
ಒಂದು ಚಿಕ್ಕ ಚೆಂದದ ಕೊಠಡಿ

ಹಣದ ಅಂದಾಜ ಬಿಟ್ಟು
ಮನೆಯ ನಕ್ಷೆ ರಚಿಸುತ್ತಾ ಕೂತೆ
ಹಜಾರ 14x13 ಅಡಿ
ಅಡುಗೆ ಕೋಣೆ 10x8 ಅಡಿ
ನನ್ನ ಕೊಠಡಿ ....

ಇದ್ದಕ್ಕಿದ್ದಂತೆ ಜೀವ ಜಲ್ಲೆಂದಿತು
ಒಳಗಲ್ಲೋ ಪಿಸುಗುಡುತ್ತಿತ್ತು,
"ಅರಡಿ x ಮೂರಡಿ"
"ಅರಡಿ x ಮೂರಡಿ"



ಹುಡುಗಿಯರು

– ಪ್ರೊ|| ಶಿವಕುಮಾರ ಕಲ್ಲೂರ

ಈ ಹುಡುಗಿಯರು ನಗುತ್ತಾರೆ. ನಗಿಸುತ್ತಾರೆ.
ರಜತ ಪರದೆಯ ಚಿತ್ರದ ಗೊಂಬೆಗಳಂತೆ
ಬೆರಗು ಹುಟ್ಟಿಸುತ್ತಾರೆ. ಕಣ್ಮನ ಸೆಳೆಯುತ್ತಾರೆ
ಆಕಾಶದಲಿ ಮಿನುಗುವ ನಕ್ಷತ್ರಗಳಂತೆ
ಭ್ರಮಾಲೋಕದಲ್ಲಿ ವಿಹರಿಸುತ್ತಾರೆ ಮಿಂಚುತ್ತಾರೆ.
ಗುಲಾಬಿ ವನದಲ್ಲಿ ಓಲಾಡುವ ಬಣ್ಣದ ಚಿಟ್ಟೆಗಳಂತೆ
ಕನಸು ಕಾಣುತ್ತಾರೆ. ಕನವರಿಸುತ್ತಾರೆ.
ಕೂಸುಗಳು ಕನ್ನಡಿಯ ಕಂಡಂತೆ.

ಪ್ರೀತಿಯ ಹುಚ್ಚು ಹಚ್ಚಿಕೊಳ್ಳುತ್ತಾರೆ
ಕೊಚ್ಚಿಹೋಗುತ್ತಾರೆ. ಸುಳಿಗಾಳಿಗೆಸಿಕ್ಕ ಹಡಗಿನಂತೆ
ಬಾಳ ಹಾದಿಯಲ್ಲಿ ನಡೆವಾಗ ಬೀಳುತ್ತಾರೆ, ಏಳುತ್ತಾರೆ
ನಿಂತ ನೆಲ ಕಾಣದೇ ಮುಗ್ಗರಿಸುತ್ತಾರೆ,
ರೆಕ್ಕೆ ಮುರಿದು ಹಾರುವ ಹಕ್ಕಿಯಂತೆ.

ಸಂಜೆಯ ರಂಗು ಏರುವ ಮುನ್ನ
ಗೆಜ್ಜೆ ಕಟ್ಟಿಕೊಂಡು ಕುಣಿಯುತ್ತಾರೆ, ಕುಣಿಸುತ್ತಾರೆ.
ಹುಡುಗರ ಎದೆ ನಡುಗುವಂತೆ,
ಮಾತಾಡುತ್ತಾರೆ. ಮೌನವಾಗುತ್ತಾರೆ, ಕೊನೆಗೆ
ನೆನಪಾಗಿ ಕಾಡುತ್ತಾರೆ, ಕಳೆದುಹೋದ ದಿನಗಳಂತೆ.

ಒಂದು ಅಪೂರ್ಣ ಕವನ

- ಟಿ. ಎಂ. ಮಣ್ಣೂರ

ಅಂದು
ನಾನು ನಿನಗೆ
ಭೇಟಿಯಾದಾಗ
ನನ್ನ ಬಗ್ಗೆ
ತಾತ್ಸಾರ ಇದ್ದಿತು

ನನ್ನ ಕಂಡರೆ ಸದಾ ನಗುವ ನೀನು
ಅದೇಕೋ ವಿಸ್ಮಯಳಾಗಿದ್ದಿ
ವಿನಮ್ರಳಾಗಿದ್ದಿ

ನಿನ್ನ ಹಂಬಲಿಸಿ ಹಾತೊರೆದು
ಹಾಹಾರಿ ಬಂದ ನನಗೆ
ದುಃಖದ ಕಡಲೆ ಹರಿದು ಬಂದಂತಿತ್ತು

ನಿನ್ನ ಮಾತು ಕೇಳಿ
ಸಂತಸಗೊಳ್ಳಬೇಕೆಂದ ನನಗೆ
ನಿಂತ ನೆಲವೇ ಬಿರಿದಂತಿತ್ತು

ನಿನ್ನ ಮುಖವ ನೋಡಿ
ಆನಂದಿಸಬೇಕೆಂದಿದ್ದ ನನಗೆ
ದುಃಖದ ಪ್ರಳಯವೇ ಅಪ್ಪಳಿಸಿತ್ತು

ನಿನ್ನ ನಗುವಿನ ನೋಟ
ನೋಡಬೇಕೆಂದಿದ್ದ ನನಗೆ
ಚಂದ್ರನಿಗೆ ಗ್ರಹಣ ಹಿಡಿದಂತಾಗಿತ್ತು

ನಿನ್ನ ಹೃದಯದೊಂದಿಗೆ
ಚೆಲ್ಲಾಟವಾಡಬೇಕೆಂದಿದ್ದ ನನಗೆ
ಸ್ಪಂದನವೇ ನಿಂತು ಹೋದಂತಿತ್ತು

ನಿನ್ನ ಮುಖದ ಮೇಲಿನ
ಮುಗ್ಧತೆ ನೋಡಬೇಕೆಂದಿದ್ದ ನನಗೆ
ಕರಾಳ ದೃಶ್ಯದ ಕಪ್ಪುಗೆರೆಗಳು ಕಾಣುತ್ತಿದ್ದವು

ನಿನ್ನ ಅರಸುತ್ತ ಅಂಗೈಯಲ್ಲಿ
ಹೃದಯ ಹಿಡಿದು ಬಂದ ನನಗೆ
ಅಸುಕರು ಬಡಿದಂತಾಗುತ್ತಿತ್ತು..

-○-

ಹನಿಗವಿತೆಗಳು

– ಡಾ॥ ಅಶೋಕ ಕುಳೀಕುಮುಟಗಿ

ಅನುಭವ

ಕನ್ನಡಿಯಲ್ಲಿ ನನ್ನ ಮುಖ
ನೋಡುವ ಧೈರ್ಯ ನನಗಿಲ್ಲ.
ಏಕೆಂದರೆ ಭಯ, ಆತಂಕಗಳ
ಬಯಲಾಟ ನೋಡಿ ನಿದ್ದೆಗೆಟ್ಟ
ಅನುಭವ ನನಗಿಲ್ಲ.

ತೊಡಕು

ನನಗೆ ಹೂ ಕೊಡುವ
ಗಿಡವೆ ಸಾಕು
ಏಕೆಂದರೆ ಹೂವಿರುವ
ಮುಡಿ ಬಲು ಸಿಡುಕು
ಅಷ್ಟೇ ತೊಡಕು.

ಹುಚ್ಚನ ಅಳುವು.

ಜಾಣ ನಗುವದು
ಹುಚ್ಚು ಪ್ರೇಮಕ್ಕಾದರೆ
ಹುಚ್ಚ ಅಳುವದು
ಪ್ರೇಮದ ಹುಚ್ಚಿಗೆ.

ಕಾಣೆಯಾದ ಕ್ಷಣಗಳು

ನನ್ನ ನಿಷ್ಕಾಳಜಿಯಿಂದ
ಕೈತಪ್ಪಿ ಜಾರಿಹೋದ
ಮಧುರ ಕ್ಷಣಗಳು
ನಿನಗೆ ಸಿಕ್ಕಿದ್ದರೆ
ನನಗೆ ತಂದು ಮುಟ್ಟಿಸುವೆಯಾ
ಗೆಳತಿ ?

ಮಧುರ ಮಾಲಿನ್ಯ

ಈ ಪ್ರೇಮವೆಲ್ಲ, ಗಟ-ಗಟನೆ ಕುಡಿಯಲೇ
ಆದರೆ ಹಾಗೆ ಕುಡಿದರ ಅದರ ರುಚಿ ಹತ್ತಲಿಕ್ಕಿಲ್ಲ.
ತೀರ್ಥದಂತೆ, ಹನಿ-ಹನಿಯಾಗಿ ಸೇವಿಸಿದರೆ,
ಅದರ ಮಧುರತೆಯಿಂದ, ಮದವೇರಬಹುದು
ಅಥವಾ
ಮಾಲಿನ್ಯನಿಂದ ಎಚ್ಚರ ತಾಳಲೂ ಬಹುದು.



ಬಸವ ಪುರಾಣ

– ಚಂದ್ರಶೇಖರ ಪಾಟೀಲ

ಸ್ವರ್ಗಲೋಕ ಭೂಲೋಕ ಬೇರಿಲ್ಲ ಕಾಣಿರೋ
  ಅಂದ ನಿನ ಬೇರಿಗೇ ಕೈ ಹಾಕಿ ಬಸವಾ ।
ಶಿವನ ಒಡ್ಡೋಲಗಕೆ ಪಾರ್ಸಲ್ಲು ಮಾಡಿದೆವು
  ಶಿವನಿಂದಲೇ ಶಾಪ ಕೂಡಿಸಿದೆವು ಬಸವಾ ॥

ನಮ್ಮ ಹಾಗೇ ಎರಡು ಕಾಲು, ಕೈ ಇದ್ದ ನೀ
  ನಾಲ್ಕು ಕಾಲಿನ ಪ್ರಾಣಿಯಾದಿ ಬಸವಾ ।
ಕ್ಯಾಬರೇ ಡ್ರೆಸ್ ತೊಟ್ಟ ಶಿವಪಾರ್ವತಿಯು ಹೊತ್ತು
  ನಂದಿಯಾಗಿಯೆ ಬಂದಿ ನೀನು ಬಸವಾ ॥

ಬಸವನೆಂದರೆ ಪಾಪ ದೆಸೆಗೆಟ್ಟು ಓಡುವದು
  ಎಂಬ ಗ್ಯಾರಂಟಿ ಇದೆ ನಮಗೆ ಬಸವಾ ।
ಎದ್ದು ಕುಂತರೆ ಬಸವ, ಕುಂತು ಎದ್ದರೆ ಬಸವ
  ಕೆಮ್ಮಿದರೆ, ಸೀತರೆ ಬಸವ ಬಸವಾ ॥

ಅಂಚೆಸ್ಟ್ಯಾಂಪಿನ ಮೇಲೆ ಭಕ್ತಿಭಂಡಾರಿ ನೀ,
  ನಿನ್ನ ಭಕ್ತರ ಉಗುಳು ನೆಕ್ಕು ಬಸವಾ ।
ಕ್ಯಾಲೆಂಡರಲಿ ಮಾತ್ರ ನೀನು ಹಿಟ್ಲರನಾದಿ,
  ಬಸವಸಮಿತಿಗೆ ಶಂಖವಾದಿ ಬಸವಾ ॥

ನಿನ್ನ ನಾಮದ ಬಲವ ಹೊತ್ತ ಕೌಲೆತ್ತುಗಳು
  ರಾಷ್ಟ್ರಕೇ ಪತಿಯಾಗಬಹುದು ಬಸವಾ ।
ನಿನ್ನ ಮುದ್ರೆಯ ಹೊತ್ತ ಇಂದಿರಾ-ಸಂಜಯರು
  ಕೈಲಾಸ ಕಂಡದ್ದು ಸುಳ್ಳೈಬಸವಾ ॥

ನಿನ್ನ ಮುತ್ತಿನ ಹಾರ ನಿನಗೆ ಉರುಲಿನ ಹಗ್ಗ,
  ನಿನ್ನ ಲಿಂಗವೆ ಕೊರಳಗುದ್ದಿ ಬಸವಾ ।
ಹೊನ್ನಶೂಲದ ಜೇಲಿನಲ್ಲಿ ಕೊಳೆಯುವ ನಿನಗೆ
  ಕೂಡಲದ ಸಂಗನೇ ಗತಿಯು ಬಸವಾ

ಪುಸ್ತಕ ವಿಮರ್ಶೆ

ಗಟ್ಟಿ ಬರೆಯುವ ನಿಟ್ಟಿನಲ್ಲಿ...

– ಚಂದ್ರಕಾಂತ ಕರದಳ್ಳಿ

ವಸಂತ
(ಕವನ ಸಂಕಲನ)
ಲೇ : ನಾಗೇಶ ರಾಂಪೂರ
ಬೆಲೆ ೧೨-೦೦ ರೂ.
ಪುಟಗಳು ೫೦ + XII

ಇಂಡಿಯಾದಲ್ಲಿ
(ಕವನ ಸಂಕಲನ)
ಲೇ : ಚನ್ನಪ್ಪ ಕಟ್ಟಿ
ಬೆಲೆ ೧೨-೦೦ ರೂ.
ಪುಟಗಳು ೪೮ + XII

ಹೇಳಕೀ ಮೂಡ್ಯಾರ ಒಡೆಯರು
ಸಂಪಾದಕರು : ಡಾ॥ ಎಂ. ಎಂ. ಪಡಶೆಟ್ಟಿ
ಬೆಲೆ ೧೦-೦೦ ರೂ.
ಪುಟಗಳು : ೩೪ + XX

ಬಿರಿದ ಮೊಗ್ಗು
(ಕಾದಂಬರಿ)
ಲೇ : ಸುಶೀಲಾ ಕಮತಗಿ
ಬೆಲೆ ೨೦-೦೦ ರೂ.
ಪುಟಗಳು : ೧೭೦ + VI

ಈ ಮೇಲಿನ ನಾಲ್ಕು ಪುಸ್ತಕಗಳು "ನೆಲೆ" ಪ್ರಕಾಶನ, ಸಿಂದಗಿ ವತಿಯಿಂದ ಪ್ರಕಟಗೊಂಡಿವೆ.

ಬರದ ನಾಡೆಂಬ ಹಣೆಪಟ್ಟಿ ಹೊತ್ತುಕೊಂಡ, [illegible] ತುಂಬಿಕೊಳ್ಳುವುದರ ಜೊತೆಗೆ. ನೆತ್ತರು ಹಸಿವನ್ನು [illegible] ಸಾಹಿತ್ಯಲೋಕಕ್ಕೆ [illegible] ನೆಲದ ಕಾಣಿಕೆಯನ್ನು ಹಿಂದಿನಿಂದಲೂ ಕೊಡುತ್ತ ಬಂದಿರುವುದು. ಈ [illegible] ಗೆಳೆಯರ ಗುಂಪಿನ [illegible] ಹಲಸಂಗಿ [illegible] ವಪ್ಪ ಕಾಪಸೆ, ಸಿಂಪಿ ಲಿಂಗಣ್ಣ [illegible] ಜನಮನಕ್ಕೆ ಧಾರೆಯೆರೆದ [illegible] ನಂತರ ಶಿಶು ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆಯನ್ನು ನೀಡುತ್ತಿರುವ ಶಿಶು [illegible]ಸಂಗಮೇಶ, ಶಂ. ಗು. ಬಿರಾದಾರ.

ಕಂಚ್ಯಾಣಿ ಶರಣಪ್ಪ, ಶ. ಗು. ಸಿದ್ಧಾಪೂರ, ಇನ್ನು [illegible] ತಮ್ಮ [illegible] ರೀತಿಯಲ್ಲಿ [illegible] ಮಕ್ಕಳಿಗೆ [illegible] ಸುವ ಕೆಲಸದಲ್ಲಿ [illegible].

ಈ ನಿಟ್ಟಿನಲ್ಲಿಯೇ [illegible] ಗುರುಗಳು ಅವರಿಂದ ೧೦,೦೦೦-೦೦ ರೂ. [illegible] ಕಾಣಿಕೆಯೊಂದಿಗೆ [illegible] ಬರುವ "ನೆಲ" ಪ್ರಕಾಶನ [illegible] ಈ [illegible] ಗಳನ್ನು [illegible].

"ವಸಂತ" ಸಂಕಲನದಲ್ಲಿ ನಾಗೇಶ [illegible]ಪೂರ ಅವರು, ಕಾವ್ಯದ ಮೂಲಕ ತಮ್ಮ [illegible] "ಆಕಾಂಕ್ಷೆ" ಕವಿತೆಯಲ್ಲಿನ "ಕಡ [illegible] ಒಡಲಾಳ ಹನಿಹೀರಿ

ರ ಹಸಿರಾಗಿಸಿ ಸೊಕ್ಕುವಾಶೆ"

ಎಂಬ ಸಾಲುಗಳು ಅವರ ಕವಿತಾಶಕ್ತಿಯ ಪರಿಚಯಮಾಡಿಕೊಡುತ್ತದೆ. [illegible] ಕವಿತೆಗಳನ್ನು ಓದಲು ಹಚ್ಚುತ್ತವೆ. ಅಂತ್ಯಪ್ರಾಸ, ಅನುಪ್ರಾಸಗಳಲ್ಲಿ ಕವಿತೆಗಳು ಹೆಣೆಯಲ್ಪಟ್ಟಿರುವುದರಿಂದ ಸಹಜವಾಗಿ ಓದಿಸಿಕೊಳ್ಳುತ್ತವೆ. [illegible] ಕವಿತೆ ಬಿಚ್ಚಿಕೊಳ್ಳುವ ಸ್ಥಿತಿ, ಮನಸ್ಸನ್ನು [illegible]ಯುತ್ತವೆ. ಓದುತ್ತ ಹೋದಂತೆ ಕಾವ್ಯಾನುಭೂತಿ ನಮ್ಮೊಳಗೆ ಪ್ರವೇಶ ಮಾಡುತ್ತವೆ.

ಅಕ್ಷಿಗಳು, ಬರೆಯುತ್ತ [illegible] ದ್ದಾಗ ಮುದನಿಕೆ, ಕವಿತೆಗಳಲ್ಲಿ ಪ್ರೀತಿಯ ಅಕ್ಕರತೆಯನ್ನು, [illegible] ಒಲುಮೆಯನ್ನು ಬಿಚ್ಚಿಕೊಳ್ಳುತ್ತಾರೆ, ಎಷ್ಟೆಂದರೂ ಕವಿಗೆ ರಸಿಕತೆ [illegible] ತಾನೆ ?

ಅರರೇ.. ಕವಿಗೆ ರಸಿಕತೆ ತಾನೆ! ಮುಖ್ಯವೆಂದು ತಿಳಿದರೆ ತಪ್ಪಾದೀತು. ಸಮಾಜಿಕ ಜೀವನದಲ್ಲಿ, ಕಂಡಾಂಶ ಸತ್ಯಗಳನ್ನು ಬಿಚ್ಚಿಡುವ ಭಾವನೆಗಳು ಬಂದಾಗ, ಜಾಗೆಗಳತ್ತಿಯ ನೆನಪಷ್ಟೇ ಅಲ್ಲಾ, ಸುತ್ತಲಿನ ಸಮಾಜದ ಗತಿಯನ್ನು "ಶಾಸಕ" ಕವನದಲ್ಲಿ ವ್ಯಂಗವ ಮಾಡುತ್ತಾ....

ಇಲ್ಲಿ ಎಲ್ಲೆಡೆಯಲ್ಲಿ
ಬರದ ಭೀಕರ ವರ್ಸ
ಅಲ್ಲಿ ನಡೆದಿದೆ, ನಿನಗೆ ಮಾನಸನ್ಮಾನ

ಎಂದು ಗೇಲಿ ಎಬ್ಬಿಸುತ್ತಾರೆ. ಸಮಾಜದ ನೋವನ್ನು ಬಿಚ್ಚುತ್ತಾರೆ, ಮೌನ-ಮಾತಿನಿಂದ ಚುಚ್ಚುತ್ತಾರೆ.

ವಿಪರ್ಯಾಸ, ಅನುಕರಣೆ, ಗಲಿಬಿಲಿ, ಕನ್ನಡ ಮನೆ ಹಬ್ಬ, ವಸ್ತುಸ್ಥಿತಿ ಮೊದಲಾದ ಚುಟುಕುಗಳು ಚಾಕಲೇಟ ತಿನ್ನಿಸಿದರೆ, "ಕವಿ-ವಿಮರ್ಶಕ" ಚುಟುಕಿನಲ್ಲಿ, ಬರಹಗಾರ ವಿಮರ್ಶಕನ ಮಾನಸ್ಥಿತಿಯನ್ನು ಅಳಿ-ದಿಡುತ್ತಾರೆ. ಆರೋಗ್ಯಕರ ನಿಲುವಿನ ಒಳ್ಳೆಯ ಕವಿತೆಗಳನ್ನು ಕೊಟ್ಟು ಕನ್ನಡ ಸಾರಸ್ವತ ಲೋಕಕ್ಕೆ ತಮ್ಮ ಕಾಣಿಕೆಯನ್ನು ಕೊಟ್ಟಿರುವ ನಾಗೇಶ ರಾಂಪೂರ ವರ ಬೆಳೆದ ಸ್ಥಿತಿಯನ್ನು ಮನಗಾಣಿಸಿದ್ದಾರೆ. ಪ್ರಥಮ ಸಂಕಲನದಲ್ಲಿಯೇ ಯಶಸ್ವಿಯಾಗಿದ್ದಾರೆ.

"ಇಂಡಿಯಾದಲ್ಲಿ" ಚಿನ್ನಪ್ಪ ಕಟ್ಟಿಯವರಂದೂ ಮೊದಲನೆ ಸಂಕಲನ. ನಾಗೇಶ್ ರಾಂಪೂರ, ಕಟ್ಟಿಯವರದೂ. ಜೋಡಿ ಓಂಟಿ. ಗಳಿಕನದಲ್ಲಿ ಜೋಡಿಯಾದಂತೆ ಕವಿತೆ ಹೆಣೆಯುವುದರಲ್ಲಿಯೂ ಜೋಡಿ.

ಕವಿ ಕವಿತೆಯನ್ನು ಏಕೆ ಬರೆಯುತ್ತಾನೆ, ಎಂಬ ಪ್ರಶ್ನೆಯನ್ನು [illegible] ತಿಳಿಯುವುದೇ [illegible]. ಇಲ್ಲಿ ಕವಿತೆಗಳನ್ನು ಇಟ್ಟಿ ನಮ್ಮ ಮುಂದಿಟ್ಟಿದ್ದಾರೆ. ಇಡೀ ಅವರ ಕವಿತೆಗಳಲ್ಲಿ ವ್ಯವಸ್ಥೆ ವಿರುದ್ಧದ ಸಿಟ್ಟು, ಇತಿಹಾಸದ ಅಪಚಾರ ಹೊಟ್ಟೆ ತುಂಬಿದವರ ಸ್ಥಿತಿ. ಮೊದಲಾದ ಕವಿತೆಗಳಲ್ಲಿ ತಮ್ಮ ಸಿಟ್ಟನ್ನು ತೋರಿಸಿಕೊಂಡಿದ್ದಾರೆ.

ನಿಮ್ಮಂತೆ ಇತರರೂ ತಮ್ಮಂತೆ ತಿಳಿದು ಕೊಳ್ಳದವ
ತಿಳಿದುಕೊಳ್ಳಿ, ಅರಿದುಕೊಳ್ಳಿ
ಕೊನೆಗೊಮ್ಮೆ ಹಿಡಿದು "ಕೊಳ್ಳಿ" .
ಮೈಗೊಡವಿ ನಿಂತುಕೊಳ್ಳಿ
ತಮ್ಮ ಹೊಟ್ಟೆಗೆ ಕಾಲು ಮಾಡಿಕೊಂಡವರ
ಚರ್ಮ ಸುಲಿದು
ನಿಮ್ಮ ಕಾಲಿಗೆ ಮೆಟ್ಟು ಮಾಡಿಕೊಳ್ಳಿ

ಎಂಬ ಸಾಲುಗಳು ಬಂಡಾಯದ ಅರ್ಭಟವನ್ನು, ವ್ಯವಸ್ಥೆಯ ಅಸಹಾಯಕತೆ ಯನ್ನು ಸೂಚಿಸುತ್ತದೆ. ವ್ಯವಸ್ಥೆಯ ವಿರುದ್ಧ ತಿರುಗಿ ಬೀಳುವ ಸಹಜ ಭಾವನೆಗಳು. ಎಲ್ಲರಂತೆ ಕಟ್ಟಿಯವರಲ್ಲಿಯೂ ಮನೆ ಮಾಡಿಕೊಂಡಿವೆ. ಆದರೆ ಫಲ ಸೊನ್ನೆ ಎಂದೇ ಹೇಳಬೇಕು.

"ಇಂಡಿಯಾದಲ್ಲಿ" "ಕಟ್ಟುತ್ತಾರೆ" "ಕೋಗಿಲೆಗೆ" "ಏನು ಬೇಡಲಿ ದೇವಾ" "ಎಳಿ ಕಂಡಿದ್ದೇನೆ" ಮೊದಲಾದ ಕವಿತೆಗಳು ಓದಿಸಿಕೊಳ್ಳುತ್ತವೆ.

"ಇಂಡಿಯಾದಲ್ಲಿ" ಏ ಬೆಳೆಯುವದಿಲ್ಲ ಎಂಬ ಜಾಡನ್ನು ಹಿಡಿದು ಕವಿತೆ ಹೆಣೆಯುವಲ್ಲಿ ಸಫಲರಾಗಿದ್ದಾರೆ. ನಮ್ಮನ್ನು ಮುಂದಕ್ಕೆ ಹೋಗಲು ಬಿಡುವುದೇ ಇಲ್ಲ. "ಎಂಬುದನ್ನು" "ಬೆಳೆಯುವುದಿಲ್ಲ" ಎಂಬ ಸಾಂಕೇತಿಕ ದೊಂದಿಗೆ ಹೇಳುತ್ತಾರೆ.

ಅಲ್ಲೊಂದು ಇಲ್ಲೊಂದು ಚುಟುಕುಗಳು ಚಟಾಕಿ ಹಾರಿಸಿದರೂ "ಬಾರ್ಸಿಲೋನಾ" "ಸೋಲೆ ಸೋಲು" ವಲಸೆ ವರ್ತಮಾನಕ್ಕೆ ಹಿಡಿದ ಕೈ-ಗನ್ನಡಿಗಳು. ಕಾವ್ಯ ಕ್ಷೇತ್ರದಲ್ಲಿ ತಮ್ಮ ಗಟ್ಟಿತನವನ್ನು ಕಟ್ಟಿಯವರು ರೂಪಿ-ಸಿಕೊಂಡಿದ್ದನ್ನು ಕಾಣಬಹುದು.



"ಹೇಳಕೀ ಮಾಡ್ಯಾರ ಒಡೆಯರು" ಡಾ|| ಎಂ. ಎಂ. ಪಡಶೆಟ್ಟಿ ಯವರು ಸಂಪಾದಿಸಿದ ಹೇಳಿಕೆಗಳ ಸಂಗ್ರಹ, ಭಾರತದ ಕೃಷಿ ಜೀವನದಲ್ಲಿ ಹಾಸುಹೊಕ್ಕಾಗಿರುವ ಈ ಹೇಳಿಕೆಗಳು, ಇಡೀ ಜನ-ಜೀವನದಲ್ಲಿ ತಮ್ಮ ಪ್ರಭಾವವನ್ನು ಅಚ್ಚಳಿಯದೆ ಉಳಿಸುತ್ತವೆ.

ಮಳೆ ಆಧಾರಿತ ನಂಬಿಗೆಯ ಮೇಲೆ ನಿಂತಿರುವ ಕೃಷಿಕನ ಜೀವನ-ಯದ ಬಿತ್ತು-ಬೆಳೆಯ ವಿವರಗಳು ಒಳಿತು ಕೆಡಕುಗಳು, ಸುಖ-ದುಃಖಗಳು ಸಫಲತೆ ವಿಫಲತೆ ಬದುಕಿನ ರೀತಿಯನ್ನು ಬಿಚ್ಚುತ್ತವೆ.

ಮಳೆ ಬೆಳೆ ಕುರಿತಾದ "ಕುರುಬ ಹೇಳಿಕೆಗಳ" ಕುರಿತು ೮೪ ಡಾಂಡೇಲಿಯಲ್ಲಿ ಜರುಗಿದ ಶಿಬಿರದಲ್ಲಿ ಮಂಡಿಸಿದ ಪ್ರಬಂಧದ ಜಾಡನ್ನೇ ಹಿಡಿದು ಮುಂದೆ "ಹೇಳಕೀ ಮಾಡ್ಯಾರ ಒಡೆಯರು" ಪುಸ್ತಕ ಹೊರತರಲು ಪ್ರೇರೇಪಿಸಿತು, ಎಂದು ಡಾ|| ಎಂ. ಎಂ. ಪಡಶೆಟ್ಟಿಯವರು ತಮ್ಮ ಪ್ರಸ್ತಾವನೆ ಯಲ್ಲಿ ವಿವರವಾಗಿ ಈ ಕುರಿತು ಚರ್ಚಿಸಿದ್ದಾರೆ.

ಮನುಷ್ಯ ಅವಲಂಬ ಇರುವುದು ಮ[illegible] ಮೇಲೆ. [illegible] ಯುವ ಜನಕ್ಕಿಂತಲೂ ಮಳೆ ಬಂದರೆ ಬೆಳೆ. [illegible] ಬಾರದೆ ಬದುಕು [illegible] ವಪ್ಪರ ಮಟ್ಟಿಗೆ ಮಳೆಯೊಡನೆ ಅವಿನಾಭಾವ ಸಂಬಂಧ. ಆ ಸಂಬಂಧ ವಾದರೂ ಎಂಥದು ? ಒಡೆಯರ [illegible] ನೇಪರ ಹೇಳಿಕೆಗಳು ಎಂದು ಮೊದಲಾದ ಪ್ರಕಾರಗಳ [illegible]

ಬಿಷ್ಟು ಹೇ ವಾ, ಕರಿಂಗ್ಲಿ [illegible]ನವಗ. ಸೂರ್ಯ [illegible] ಸಂಗರಿ ನಾಕಾಣೆ ಹಿಂಗಾರಿ [illegible]ಟಾಣೆ. [illegible] ನಡೆಲ್ಲಾ ಬಸವನ ಕ[illegible] ಹಿಡಿಹೊನ್ನ ಕೊಟ್ಟ ದಂಡಿಗಿ ಹತ್ತೇನಿ. ಕಲ್ಲಿಗಿ [illegible] ಅಗಸಿ[illegible] ಕುಂತು, ವಿಜಾಪೂರ ಅಗಸಿ [illegible] ಗೂಗಿ ಕುಂತು. ಗಿಳಿ [illegible] ಹಣ್ಣು ಬಿತ್ತು, ಗೂಗಿ [illegible] ಬಿ[illegible]
ಬಿಷ್ಟು ಪರಿ ಹೇಳಿದ್ರೂ, ಒಕ್ಕಲಿಗ [illegible] ಸಮಾಧಾನವಾಗಲಿಲ್ಲ [illegible], [illegible]ಗಾರಿ ಮಳಿ ನವಿಲಿನ [illegible], ಹಿಂ[illegible]ರಿ ಮಳಿ [illegible] ಬಸವನ ಚಿಕ್ಕ ದಸರಿಗಿ ಹರಿದೀನಿ.

ಮಿರಗಾ ಆದ್ರಿಗಿ [illegible]ಯಾಕ್ತು.
ಹುಣ್ಣನಲ್ಲಿ ಕಲಿ ಉಳಿತು.

[illegible] ಹೇಳಿಕೆಗಳನ್ನು ಕಲೆ ಹಾಕಿ ಕನ್ನಡ ಸಾಹಿತ್ಯಕ್ಕೆ ಅಪೂ-ರೂಪವಾದ ಕೊಡುಗೆಯನ್ನು ಡಾ॥ ಪಡಶೆಟ್ಟಿಯವರು ಮಾಡಿಕೊಟ್ಟಿದ್ದಾರೆ. ಜನ-ಜೀವನದಲ್ಲಿ ಈ ಹೇಳಿಕೆಯ ಪ್ರಭಾವ, [illegible] ಬಂದಿರುವದರಿಂದ ಅವರ [illegible] ಬಿತ್ತು [illegible] ವುದರಿಂದ ರೈತ ಸಮುದಾಯಕ್ಕೆ ಇದೊಂದು ಹೊಸ ದಾಖಲೆ. [illegible] ರೂಪದಲ್ಲಿ ಈ ಹೇಳಿಕೆಗಳು [illegible] ಅರಿವಾಗುತ್ತದೆ.

ಡಾ॥ ಪಡಶೆಟ್ಟಿಯವರ ವಿವರವಾದ ಪ್ರಸ್ತಾವನೆ, ಅನುಬಂಧ ಇರುವುದರಿಂದ ಹೇಳಿಕೆಗಳ ವಿಸ್ತೃತವಾದ ಪರಿಚಯವಾಗುತ್ತದೆ. ರೈತ ಸಮುದಾಯದಲ್ಲಿ ಇರಲೇ [illegible] ಎಲ್ಲರೂ ಈ ಹೇಳಿಕೆಗಳ ಕಡೆ ಕಣ್ಣು ಹಾಯಿಸಬೇಕಾದ ಪುಸ್ತಕ ಎಂದು ಹೇಳಲೇಬೇಕಾಗುತ್ತದೆ,

"ಬಿರಿದ ಮೊಗ್ಗು" ಸುಶಿಲಾ ಕಮತಗಿಯವರ ಮೊದಲ ಕಾದಂಬರಿ ಸಾಹಿತ್ಯ ಕ್ಷೇತ್ರದಲ್ಲಿ ಆರಂಭದ ಕೃಷಿ ಎಂದರೆ ಕಾವ್ಯ ವಿಫಲವಾಗಿ ಕಾವ್ಯ ಬಂದಷ್ಟು ಕಥೆ, ಕಾದಂಬರಿ, ನಾಟಕ ವಿಮರ್ಶೆ ಬಹಳ ಕಡಿಮೆ. ಆ ನಿಲುವನ್ನು ಮುರಿದು ಕಾದಂಬರಿಯನ್ನು ಸಾಹಿತ್ಯ ಕ್ಷೇತ್ರಕ್ಕೆ ಕೊಡಮಾಡಿದ ಯಶಸ್ಸು ಸುಶೀಲಾ ಕಮತಗಿಯವರಿಗೆ ಸಲ್ಲಬೇಕು.

"ಬಿರಿದ ಮೊಗ್ಗು" ಕಾದಂಬರಿಯು ಮೂರು ಕುಟುಂಬಗಳ ಹಿನ್ನೆಲೆಯಲ್ಲಿ ಬಿಚ್ಚುತ್ತಾ ಹೊಗುತ್ತದೆ. ತಂದೆ ಶಂಕರ ತಾಯಿ ಸವಿತಾಳ ಒಬ್ಬಳೆ ಮಗಳಾದ ಪ್ರೀತಿ, ಕಾದಂಬರಿಯ ಮುಖ್ಯ ಪಾತ್ರ, ಅಲ್ಲದೆ ಪ್ರೀತಿಗೊಬ್ಬ ಅಣ್ಣ ರಾಜೇಶ್. ಶಂಕರನ ತಾಯಿ ರುದ್ರಮ್ಮನ ರುದ್ರಾವತಾರಕ್ಕೆ ತನ್ನ ಮಕ್ಕಳನ್ನು ಬಿಟ್ಟು ಜೀವವನ್ನೇ ಬಲಿಕೊಟ್ಟ ಸವಿತಾ, ಮಕ್ಕಳನ್ನು ಅನಾಥರನ್ನಾಗಿ ಮಾಡುತ್ತಾಳೆ. ಸಾಯುವ ಗಳಿಗೆಯಲ್ಲಿ ಸವಿತಾ ತನ್ನ ಅಕ್ಕ ಸುನಂದಾಳಿಂದ "ಪ್ರೀತಿಯ" ಆರೈಕೆಯ ಜವಾಬ್ದಾರಿಯನ್ನು ಒಪ್ಪಿಸಿ ಪ್ರಾಣ ಬಿಡುತ್ತಾಳೆ.

ಇಲ್ಲಿಂದಲೇ "ಪ್ರೀತಿ" ಎಲ್ಲರಿಂದಲೂ ಪ್ರೀತಿಗೆ ವಂಚಿತಳಾಗುತ್ತಾಳೆ. ಅನಾಥ ಶಿಶುವಿನಂತೆ ಬಾಳತೊಡಗಿದರೂ ದೊಡ್ಡಮ್ಮನ ಮಕ್ಕಳಾದ ಶಾಲಿನಿ, ನಳಿನಿಯರಿಂದ ಅವಾಚ್ಯ ಶಬ್ದಗಳನ್ನು ಬೈಯಿಸಿಕೊಳ್ಳುತ್ತಾಳೆ.

ಏನೇನೋ ಎಡರು-ತೊಡರುಗಳನ್ನು ಎದುರಿಸಿ ಓದುವಾಗ ಬಂದ ತೊಂದರೆಗಳನ್ನು ಪ್ರೀತಿಯು ಗೆಳತಿ ಗೀತಾಳಿಂದ ಎದುರಿಸಿ ಓದನ್ನು ಮುಂದುವರಿಸುತ್ತಾಳೆ. ಅದರೆ "ಪ್ರೀತಿ ಪಟ್ಟಪಾಡು ಯಾವ ವೈರಿಗೂ ಬೇಡ" ಕೊನೆಗೆ ಸುನಂದಾಳ ಬಂಧುಗಳೊಬ್ಬರ ಮನೆಗೆ ಹೋಗಿ ಆರೈಕೆಮಾಡಿ, ವೈದ್ಯಕೀಯ ಶಿಕ್ಷಣವನ್ನು ಮುಂದುವರಿಸುತ್ತಾಳೆ. ಆ ಮನೆಯಲ್ಲಿ ಪ್ರಶಾಂತ ಪ್ರೀತಿಸತೊಡಗುತ್ತಾನೆ. ಈ ಸಂದರ್ಭದಲ್ಲಿಯೋ ಆರೋಪ ಹೊತ್ತು ಮನೆ ಬಿಡುವ ಪ್ರಸಂಗ ಬಂದಾಗ ಗೆಳತಿಯ ಮನೆಗೆ ಹೋಗುತ್ತಾಳೆ. ಆ ಗೆಳತಿಯ ಮನೆ ತನ್ನ ತಂದೆಯ ಗೆಳೆಯನದು. ಅಲ್ಲಿ ತಂದೆಯ ಭಾವಚಿತ್ರ, ಹೀಗೆ ಸಿನೆಮಾ ರೀಲಿನಂತೆ ಕಾದಂಬರಿಯ ಪುಟಗಳು ಬಿಚ್ಚುತಾ ಹೋಗುತ್ತವೆ.

ಕೊನೆಗೆ ಆಕೆಯ ಅಣ್ಣ ರಾಜೇಶ್ ಸಿಕ್ಕಾಗ ಬಾಳಿಗೊಂದು ಆನಂದ ಅಂತಿಮ ತೆರೆ. ಕೊನೆಗೆ ಹಲವಾರು ಕಷ್ಟ-ಕರ್ತವ್ಯಗಳನ್ನು ಹೊತ್ತ ಪ್ರೀತಿಗೆ ಪ್ರಶಾಂತನೊಡನೆ ಮದುವೆಯಾಗಿ ಕಾದಂಬರಿಯ ಕಥೆ, ಸುಖಾಂತದಲ್ಲಿ ಮುಕ್ತಾಯವಾಗುತ್ತದೆ.

ನಿಜವಾಗಿಯೂ ಒಂದು ಸಿನೆಮಾ ಆಗಲ ಏನೆಲ್ಲ ಸಂಗತಿಗಳು ಈ ಕಾದಂಬರಿಯಲ್ಲಿ ಅಡಕವಾಗಿವೆ. ಗ್ರಾಮೀಣ ಪರಿಸರದಲ್ಲಿ, ಸುಶೀಲಾ ಕಮತಗಿಯಂಥ ಮಹಿಳೆಯರು ಇಂಥ ಉಚ್ಚಮಟ್ಟದ ಕಾದಂಬರಿಯನ್ನು ಬರೆದಿದ್ದಾರೆ. ಎಂದರೆ ಆಶ್ಚರ್ಯವಾಗುತ್ತದೆ. ಉತ್ತಮ ಕಥಾ ವಸ್ತುವುಳ್ಳ ಮನೆ ಮಂದಿಯೆಲ್ಲ ಓದಬೇಕಾದ ಉತ್ತಮ ಕಾದಂಬರಿ ಎನ್ನಲಡ್ಡಿಯಿಲ್ಲ.

ಸುಶೀಲಾ ಕಮತಗಿಯವರ "ಬಿರಿವ ಮೊಗ್ಗು" ಅದ್ಭುತ ಕಾದಂಬರಿ ನಿಜವಾಗಿಯೂ ಈ ಹೆಣ್ಣು ಮಗಳು ಬರೆದ ಈ ಕಾದಂಬರಿ ಎಂ. ಕೆ. ಇಂದಿರಾ, ತ್ರಿವೇಣಿಯವರ ಸಾಲಿನಲ್ಲಿ ನಿಲ್ಲುತ್ತದೆ. ಗ್ರಾಮೀಣ ಪರಿಸರವಲ್ಲಿದು ಕನ್ನಡ ಕಾದಂಬರಿ ಲೋಕಕ್ಕೆ ಕಮತಗಿಯವರ ಬಿರಿದ ಮೊಗ್ಗು ಈ ಭಾಗದ ಹೆಸರನ್ನು ನೆನಪಿಸುತ್ತದೆ. ಎಂದು ನಮ್ಮ ನೆಚ್ಚಿನ ಕವಿ ಚನ್ನವೀರ ಕಣವಿ ಅವರು ಕಲಬುರ್ಗಿಯಲ್ಲಿ ಮಾತಾಡುವ ಸಂದರ್ಭದಲ್ಲಿ ನನ್ನೊಡನೆ ಈ ಮಾತನ್ನು ಹಂಚಿಕೊಂಡರು.

●

ನಾ ಕಂಡ ಗೊಲಾಬೀ ಹೂ
ಬತ್ತಿ-ಬಾಡಿ ಹೋಯಿತು ।
ನನ್ನಲ್ಲಿರುವ ಮಕರಂದ
ಹಿರಿಕೊಂಡು ಹೋಯಿತು ॥
ನಾ ಮಾಡಿದ ಕಾಗದದ ಹೂ ।
ಕಾಗದ ಒನ್ನಾಗಿಯೇ ಉಳಿಯಿತು ಹೂನೀಲು

– ನಟರಾಜ ಹೂಗಾರ

ಸಾದರ ಸ್ವೀಕಾರಕ್ಕೆ ಬಂಧ ಪುಸ್ತಕಗಳು

೧ ಸಜ್ಜಲಗುಡ್ಡದ ಶರಣಮ್ಮನವರ ಪುರಾಣ
(ಲೇ. ಷ. ಬ್ರ. ಗಂಗಾಧರ ಶಿವಾಚಾರ್ಯರು ಗುಡೂರು.)
ಗ್ರಂಥದಾನ : ಗುರುಲಿಂಗಯ್ಯ ಶಿವಯೋಗಯ್ಯ ನಾವದಗಿ
ಹಿರೇಮಠ, ಶಹಾಪೂರ.
ಪುಟಗಳು XX+೧೦೪ ಬೆಲೆ ರೂ. ೫೧–೦೦, ೧೯೯೩

೨ ಮಂಗ್ ವಗೆದ್ ಟೆಂಗ್ (ಲೇ. ರಂಗರಾವ ಬಡಶೇಷಿ)
ಪುಟಗಳು ೧೦೮, ೧೯೯೪

೩ "ಪರಾಗ" ಭಾವಗೀತೆಗಳು (ಲೇ. ಮಹಾಂತೇಶ ಮಲ್ಲನಗೌಡರ)
ಬೆಲೆ ರೂ. ೧೫–೦೦, ಪುಟಗಳು ೭೦, ೧೯೯೩

೪ ಸಂಗನಬಸವೇಶ್ವರ ಅನುಭವಾಮೃತ ಗೀತೆ
(ಲೇ. ಮುಕ್ತಾನಂದ ಸ್ವಾಮಿಗಳು) ಬೆಲೆ ರೂ. ೧೫–೦೦, ೧೯೯೩

೫ ಪ್ರತಿಧ್ವನಿ (ಕವನಸಂಕಲನ)
ಸಂ. ಸರ್ಪಭೂಷಣ ಹಿರೇಮಠ, ಹೋತಪೇಠ. ಬೆಲೆ ರೂ. ೧೨ ೧೯೯೩

೬ "ಕತ್ತಲಲ್ಲಿ ಖಾಲಿ ತಟ್ಟೆ ಹಿಡಿದವರು" ಲೇ. ಜಿ. ಎಂ. ಕುಲ್ಕರ್ಣಿ
ಬೆಲೆ ರೂ. ೧೫–೦೦ ೧೯೯೩

೭ ಪುಟ್ಟಕ್ಕನ ಪತ್ರಗಳು "ಆನಂದರವಿ"
ಪ್ರತಿಭಾ ಯುವವೇದಿಕೆ, ರಾಜಾಜಿ ನಗರ, ೨ನೇ ಹಂತ, ಬೆಂಗಳೂರ
ಬೆಲೆ ರೂ. ೫ ೧೯೯೩

೮ ಕಿಚ್ಚಿಲ್ಲದ ಬೇಗೆ (ಕವನಸಂಕಲನ) ಲೇ. ಎಸ್. ಜಿ. ಸ್ವಾಮಿ
ಅನನ್ಯ ಪ್ರಕಾಶನ, ಹೂ ಮನೆ, ಶ್ರೀದೇವಿ ನಗರ, ವಿದ್ಯಾಗಿರಿ ಧಾರವಾಡ
ಬೆಲೆ ರೂ. ೨೪ ೧೯೯೪

೯ ನನ್ನ ಪ್ರೀತಿಯ ಕವಿತೆ (ಸಂಕಲನ)
ಲೇ. ಎಸ್. ಜಿ. ಸ್ವಾಮಿ, ಜಿಲ್ಲಾ ಉತ್ಸವ ಸಮಿತಿ, ರಾಯಚೂರ.

೧೦ ಕೌದಿ (ಕವನಸಂಕಲನ) ಲೇ. ಡಾ॥ ಕಾಶಿನಾಥ ಅಂಬಲಗೆ

೧೧ "ಕೋಗಿಲೆ ಅಳುತಿದೆ" ಸಂ. ಡಾ॥ ಕಾಶಿನಾಥ ಅಂಬಲಗೆ

೧೨ ಪಾಂಚಜನ್ಯ (ಕವನಸಂಕಲನ) ಲೇ. ಪ್ರಭು ಖಾನಾಪೂರೆ ೧೯೯೩

೧೩ ಅಕ್ಷರ-ಒರೆಗಲ್ಲು (ಎರಡು ಬೀದಿ ನಾಟಕಗಳು)
ಲೇ. ಪ್ರೊ. ಆರ್. ಕೆ. ಹುಡುಗಿ (ರಾಹು) ೧೯೯೩

೧೪ ಹುಳಗಳು (ಕಥಾಸಂಕಲನ) ಸೂಗಯ್ಯ ಹಿರೇಮಠ, ೧೯೯೩

೧೫ ಅವರಬಿಟ್ಟ ಇವರ್ಯಾರು (ಕವನಸಂಕಲನ) ಶಂಕರಯ್ಯ ಘಂಟಿ ೧೯೯೩

೧೬ "ಜನಪದ ಕಾವ್ಯ ಪ್ರಥಮ ವಿಮರ್ಶೆ" ಡಾ॥ ವೀರಣ್ಣ ದಂಡೆ ೧೯೯೩
ಕ್ರ. ಸಂಖ್ಯೆ ೧೦ ರಿಂದ ೧೬ರ ವರೆಗಿನ ಪುಸ್ತಕಗಳ ಪ್ರಕಾಶಕರು
ಪ್ರಗತಿ ಪ್ರಕಾಶನ, ಬೇವು-ಬೆಲ್ಲ, ಜಯನಗರ, ಕಲಬುರ್ಗಿ.

೧೭ "ವಾಲೀಕಾರ ಚನ್ನಣ್ಣನ, ಜಾನಪದ ಲೋಕ"
ಲೇ. ಚನ್ನಣ್ಣ ವಾಲೀಕಾರ, ದಲಿತ ಬಂಡಾಯ ವಿಚಾರ
ಪ್ರಚಾರ ಸಮಿತಿ, ಗುಲಬರ್ಗಾ.
ಬೆಲೆ ರೂ. ೧೫೦ ಪುಟ ೩೭೮ ೧೯೯೩

೧೮ "ವಾಲೀಕಾರ ಚನ್ನಣ್ಣನ ಮುನ್ನೂರ ಮೂರು ವಚನಗಳು"
(ಲೇ. ಡಾ॥ ಚನ್ನಣ್ಣ ವಾಲೀಕಾರ) ಪ್ರ. ಶ್ರೀಮತಿ ಸಿದ್ದಮ್ಮ ವಾಲೀಕಾರ
ಬಸವ ವಿಚಾರ ಸಮಿತಿ, ಗುಲಬರ್ಗಾ.

೧೯ ಮಹಾದೇವ ಬಣಕಾರ ವಿರಚಿತ ವಿಶ್ವಬಂದು ಮರುಳಸಿದ್ಧ ಕಾವ್ಯದರ್ಪಣ
(ಲೇ. ಲಿಂಗಾರೆಡ್ಡಿ ಶೇರಿ) ಪುಟ ೭೬+VI ಬೆಲೆ ರೂ. ೧೬-೦೦

೨೦ ದಡಸೇರದ ದೋಣಿ ಮತ್ತು ಪಯಣಿಕ (ಮಿನಿ ಕಾದಂಬರಿಗಳು)
ಲೇ. ಚಿತ್ರಶೇಖರ ಕಂಠಿ, ಗೆಳೆಯರಬಳಗ ಪ್ರಕಾಶನ, ಗುಲಬರ್ಗಾ.
ಪುಟ ೧೨೨+VI

೨೧ ಕವಿತೆ ೧೯೯೧ (ಸಂ. ಅಲ್ಲಮಪ್ರಭು ಬೆಟ್ಟದೂರು,
ಪ್ರಕಾಶನ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
ಬೆಲೆ ರೂ. ೨೦-೦೦ ೧೯೯೩

೨೨ ಆಲಮಟ್ಟಿ ಜಂಗಮರು (ಕವನಸಂಕಲನ) ಲೇ. ಬಿ. ಎಸ್. ದುಂಡರೆಡ್ಡಿ
ಸ. ಪ. ಪೂರ್ವ ಕಾಲೇಜು, ಸಜ್ಜಲಗುಡ್ಡ, ಬೆಲೆ ೧೬-೦೦ ೧೯೯೪

೨೩ "ವೈರಿಗಳ ಮಧ್ಯೆ ಎದ್ದ ಕಗ್ಗತ್ತಲ ಖಂಡದ ಕಾವ್ಯ"
(ಲೇ. ಚನ್ನಣ್ಣ ವಾಲೀಕಾರ) ಅರಸಂಬೇಡಕರ್ ವಿಚಾರ
ಪ್ರಚಾರ ಸಮಿತಿ, ಬಡೆಪೂರ ಕಾಲನಿ, ಸೇಡಂ ರಸ್ತೆ, ಗುಲಬರ್ಗಾ.
ಪುಟಗಳು ೨೦೦ ೧೯೯೩

(ಗಮನಿಸಲು ಕೋರಿಕೆ : ವಿಮರ್ಶೆಗಾಗಿ ಪುಸ್ತಕ ಕಳಿಸುವವರು ೨ ಪ್ರತಿ ಕಳಿಸಿರಿ. ಸಾದರಸ್ವೀಕಾರಕ್ಕೆ ಒಂದು ಪ್ರತಿ)

ಈ ಸಂಚಿಕೆಯ ಲೇಖಕರ ವಿಳಾಸಗಳು.

- ರಾಜಶೇಖರ ಪತಗುಂದಿ ಸಿರಾಡೋಣಿ, ಅಂಚೆ ಕುರಿಕೋಟಾ, ಗುಲ್ಬರ್ಗಾ
- "ಅಪಾ" 145/2ಎ ಮಾಕಾ ಲೇಔಟ್, ಗುಲಬರ್ಗಾ.
- ಮಹಾಂತಪ್ಪ ಜಾಗಟೆ, ಅಂಚೆ ದೋರನಳ್ಳಿ, ತಾ. ಶಹಾಪುರ.
- ಚಂದ್ರಕಾಂತ ಕರದಳ್ಳಿ "ಶಿವಪ್ರಸಾದ" ಶಹಾಪುರ, ಜಿ. ಗುಲಬರ್ಗಾ.
- ಸಿದ್ಧರಾಮ ಹೊನ್ಕಲ್, ಲಕ್ಷ್ಮಿನಗರ, ಶಹಾಪುರ, ಜಿ. ಗುಲಬರ್ಗಾ.
- ರವಿ ಹಿರೇಮಠ "ಗ್ರೀಷ್ಮ ಪ್ಲಾಟ ನಂ. 145/2ಎ, ಮಾಕಾ ಲೇಔಟ್, ಗುಲಬರ್ಗಾ.
- ಚಂಪಾ "ಸಂಕ್ರಮಣ" ಪ್ರಕಾಶನ, ಧಾರವಾಡ.
- ಪ್ರೊ. ಶಿವಕುಮಾರ ಕಲ್ಲೂರ ಕಮ್ಮತ್ತಹಳ್ಳಿ, ತಾ. ಹರಪನಹಳ್ಳಿ ಜಿ. ಬಳ್ಳಾರಿ
- ಡಾ॥ ಅಶೋಕ ಕುಳೇಕುಮಟಗಿ ಕೋರವಾರ, ತಾ. ಸಿಂದಗಿ ಜಿ. ಬಿಜಾಪುರ
- ಪಿ. ಎಂ. ಮಣ್ಣೂರ, ಸಂಪಾದಕರು "ಸತ್ಯಕಾಮ" ದೈನಿಕ ಗುಲಬರ್ಗಾ.
- ಸೂರ್ಯಕಾಂತ ಪಾಟೀಲ ಸರಸಂಬಾ, 10-36, ಬ್ರಹ್ಮಪುರ, ಗುಲ್ಬರ್ಗಾ
- ಶರಣಪ್ಪ ತೋಟದ, ಅಂಚೆ ರಂಗಂಪೇಟ, ತಾ. ಸುರಪುರ
- ಪ್ರಭು ಖಾನಾಪುರೆ, ಎಲ್. ಪಿ. ಜಿ. ಕ್ವಾಟರ್ಸ್, ಬಡೆಪೂರ ಕಾಲನಿ, ಗುಲಬರ್ಗಾ.
- ಶಂಕರಯ್ಯ ಘಂಟಿ, ಗುಲಬರ್ಗಾ, ವಿ. ವಿ. ಗುಲಬರ್ಗಾ.
- ವಿಠ್ಠಪ್ಪ ಗೋರಂಟ್ಲಿ, ಭಾಗ್ಯನಗರ, ತಾ. ಕೊಪ್ಪಳ ಜಿ. ರಾಯಚೂರು
- ಸೂಗಯ್ಯ ಹಿರೇಮಠ, ಪ್ರಾಂಶುಪಾಲರು, ಪ್ರಥಮ ದರ್ಜೆ ಕಾಲೇಜು ಚಿಂಚೋಳಿ.
- ನಟರಾಜ ಪೂಗಾರ, ಹುಮನಾಬಾದ ಜಿ. ಬೀದರ

ಎರಡನೆಯ ವರ್ಷದ ಚಂದಾ ಕಳಿಸಿರಿ,
ಪತ್ರಿಕೆಯ ಮುನ್ನಡೆಗೆ ಸಹಕರಿಸಿರಿ.



Printed Matter
Book-Post

ಗೆ,

ಶ್ರೀಮತಿ/ಶ್ರೀ ಜಗದೇವಪ್ಪ, ಪಿ.ಕೆ.
ಶಹಾಪುರ.

ಸಂಪಾದಕ, ಪ್ರಕಾಶಕ, ಮುದ್ರಕ : ತಿಮ್ಮಯ್ಯ ಪುರ್ಲೆ
ಪುರ್ಲೆ ಪ್ರಿಂಟರ್ಸ್, ಶಹಾಪುರ-೫೮೫ ೨೨೩ (ಕಲಬುರ್ಗಿ ಜಿಲ್ಲೆ)